ನಿಮ್ಮೂರು ಸುದ್ದಿ

ಕನ್ನಡ ದಿನ ಪತ್ರಿಕೆ

NIMMURU SUDDI

ಸಂಪಾದಕರು: ಸುಂದರ್

Editor : Sundar

ಏಕ ಕಾಲಕ್ಕೆ
ಬಳ್ಳಾರಿ,
ಕೊಪ್ಪಳ,
ಯಾದಗಿರಿ,
ರಾಯಚೂರು,
ಕಲಬುರ್ಗಿ,
ಬೀದರ,
ವಿಜಯನಗರ
ಜಿಲ್ಲೆಗಳಲ್ಲಿ ಪ್ರಕಟ

Volume: 01, Issue: 122 RNI Number : KNKAN/25/A2770 11-05-2026 Monday Page 04, Price 2/- suddinimmuru@gmail.com Mob:-8660146563

ಸಂಪುಟ :01 ಸಂಚಿಕೆ :122 ರಾಯಚೂರು 11-05-2026 ಸೋಮವಾರ ಪುಟ 04 ಬೆಲೆ ರೂ.2/- ಮೊ:8660146563

ತಮಿಳುನಾಡಿನಲ್ಲಿ ವಿಜಯ್ ಸರ್ಕಾರ :ಸಿಎಂಯಾಗಿ ವಿಜಯ್ ಪ್ರಮಾಣ ವಚನ ಸ್ವೀಕಾರ

ಚೆನ್ನೈ(ತಮಿಳುನಾಡು),ಮೇ.10- ಚೊಚ್ಚಲ ವಿಧಾನಸಭಾ ಚುನಾವಣೆಯಲ್ಲೇ ಅದ್ಭುತ ಯಶಸ್ಸು ಸಾಧಿಸಿದ ನಂತರ ತಮಿಳಗ ವೆಟ್ರಿ ಕಳಗಂ (ಟಿವಿಕೆ) ಪಕ್ಷದ ಮುಖ್ಯಸ್ಥ ಚಂದ್ರಶೇಖರ್ ಜೋಸೆಫ್ ವಿಜಯ್ ಅವರಿಂದು ತಮಿಳುನಾಡಿನ 9ನೇ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದ್ದಾರೆ.

ರಾಜ್ಯಪಾಲ ಆರ್.ವಿ.ಅರ್ಲೇಕರ್ ಅವರು ವಿಜಯ್ ಮತ್ತು ಅವರ ಒಂಬತ್ತು ಸಂಪುಟ ಸದಸ್ಯರಿಗೆ ಪ್ರಮಾಣ ವಚನ ಬೋಧಿಸಿದರು. ಇದರಲ್ಲಿ ಹಿರಿಯರಾದ ಕೆ.ಎ.ಸೆಂಗೋಟ್ಟೈಯನ್ ಮತ್ತು ಯುವ ಮುಖಗಳಾದ ಡಾ.ಟಿ.ಕೆ.ಪ್ರಭು ಮತ್ತು ಎಸ್.ಕೀರ್ತನಾ ಸೇರಿದ್ದಾರೆ. ಚೆನ್ನೈನ ಜವಾಹರಲಾಲ್ ನೆಹರು ಕ್ರೀಡಾಂಗಣದಲ್ಲಿ ಸಮಾರಂಭ ನಡೆಯಿತು.

ಅಪಾರ ಸಂಖ್ಯೆಯಲ್ಲಿ ಸೇರಿದ್ದ ಟಿವಿಕೆ ಕಾರ್ಯಕರ್ತರ ಶಿಳ್ಳೆ, ಚಪ್ಪಾಳೆಯ ನಡುವೆ, ವಿಜಯ್ ದೇವರ ಹೆಸರಿನಲ್ಲಿ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದರು. ಸಚಿವರೂ ಸಹ ಹಿಂದಿನ ಡಿಎಂಕೆ ಆಡಳಿತದ ಇತರರಿಗಿಂತ ಭಿನ್ನವಾಗಿ ದೇವರ ಹೆಸರಿನಲ್ಲೇ



ಪ್ರಮಾಣ ಕೈಗೊಂಡರು.

ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ, ವಿಜಯ್ ಅವರ ಪೋಷಕರು, ನಟಿ ತ್ರಿಶಾ ಕೃಷ್ಣನ್ ಮತ್ತು ಇತರೆ ಗಣ್ಯರು ಹಾಗು ಅಪಾರ ಸಂಖ್ಯೆಯ ಟಿವಿಕೆ ಕಾರ್ಯಕರ್ತರು ಸಮಾರಂಭದಲ್ಲಿ ಪಾಲ್ಗೊಂಡಿದ್ದರು.

'ನಾನು ಸುಳ್ಳು ಭರವಸೆಗಳಿಂದ ಜನರನ್ನು ಮೋಸಗೊಳಿಸಲಾರೆ': ಪ್ರಮಾಣವಚನ ಸ್ವೀಕರಿಸಿದ ನಂತರ ಮಾತನಾಡಿದ ವಿಜಯ್, ನಾನು ಯಾವುದೇ ರಾಜಮನೆತನದವನಲ್ಲ. ಆದರೂ ಜನರು ನನ್ನನ್ನು ಸ್ವಾಗತಿಸಿ, ಸ್ವೀಕರಿಸಿದರು. ನಾನು ಸುಳ್ಳು ಭರವಸೆಗಳಿಂದ ಜನರನ್ನು ಮೋಸಗೊಳಿಸಲಾರೆ ಎಂದು ಹೇಳಿದರು.

ಡಿಎಂಕೆ ಸರ್ಕಾರದಿಂದ 10 ಲಕ್ಷ ಕೋಟಿ ಸಾಲ- ವಿಜಯ್: ಹಿಂದಿನ ಡಿಎಂಕೆ ಸರ್ಕಾರ 10 ಲಕ್ಷ ಕೋಟಿ ರೂ ಸಾಲ ಉಳಿಸಿದೆ. ನನಗೆ ಸ್ವಲ್ಪ ಸಮಯ ಕೊಡಿ. ನಾನು ಸರ್ಕಾರದ ಹಣಕಾಸು ಪರಿಸ್ಥಿತಿಯ ಬಗ್ಗೆ ಶ್ವೇತ ಪತ್ರ ಬಿಡುಗಡೆ ಮಾಡಲು ಚಿಂತನೆ ಮಾಡುತ್ತಿದ್ದೇನೆ. ಈ ಮೂಲಕ ಪಾರದರ್ಶಕ ಆಡಳಿತ ನೀಡಲು ಕ್ರಮ ವಹಿಸುತ್ತೇನೆ. ರಾಜ್ಯದಲ್ಲಿ ಡ್ರಗ್ಸ್ ನಿರ್ಮೂಲನೆಗೆ ಕಠಿಣ ಕ್ರಮ ಕೈಗೊಳ್ಳುತ್ತೇನೆ ಎಂದು ಭರವಸೆ ನೀಡಿದರು.

ಇದೇ ವೇಳೆ, ರಾಜ್ಯದಲ್ಲಿ ಹೊಸ ಆಡಳಿತ ಆರಂಭವಾಗಿದೆ. ನಿಜವಾದ, ಚಾತ್ಯತೀತ, ಸಾಮಾಜಿಕ ನ್ಯಾಯದ ಹೊಸ ಯುಗ ಈಗ ಶುರುವಾಗಿದೆ ಎಂದು ಹೇಳಿದರು.

ಮಿಂಚಿದ ತ್ರಿಶಾ ಕೃಷ್ಣನ್: ಪ್ರಮಾಣವಚನ ಸಮಾರಂಭದಲ್ಲಿ ತ್ರಿಶಾ ಕೃಷ್ಣನ್ ಮಿಂಚಿದರು. ಹಸಿರು ಬಣ್ಣದ ಸೀರೆ ಮತ್ತು ತಲೆಗೆ ಬಿಳಿ ಬಣ್ಣದ ಹೂವುಗಳನ್ನು ತೊಟ್ಟು ಬಂದಿದ್ದ ಅವರು ನೆರೆದಿದ್ದ ಅಪಾರ ಜನಸ್ತೋಮದತ್ತ ಕೈಬೀಸಿ ಗಮನ ಸೆಳೆದರು.

ವಿಜಯ್ ಚೊಚ್ಚಲ ಸಂಪುಟದ

3 ನೇ ಪುಟಕ್ಕೆ

ಏಮ್ಸ್ ಹೋರಾಟ ಇಂದಿಗೆ 1359 ನೇ ದಿನಕ್ಕೆ



ರಾಯಚೂರು,ಮೇ.10- ಜಿಲ್ಲಾ ಏಮ್ಸ್ ಹೋರಾಟ ಸಮಿತಿ ನಡೆಸುತ್ತಿರುವ ಅನಿರ್ದಿಷ್ಟ ಧರಣಿ ಸತ್ಯಾಗ್ರಹ ಇಂದಿಗೆ 1359ನೇ ದಿನಕ್ಕೆ ಕಾಲಿಟ್ಟಿದೆ.

ಪ್ರಾದೇಶಿಕ ಅಸಮತೋಲನೆ ನಿವಾರಣೆಗಾಗಿ, ಐಐಟಿ ಇಂದ ವಂಚಿತಗೊಂಡ, ಮಹತ್ವಕಾಂಕ್ಷಿ ಜಿಲ್ಲೆ, ರಾಯಚೂರಿಗೆ ಏಮ್ಸ್ ಆರೋಗ್ಯ ಸಂಸ್ಥೆಯನ್ನು ಮಂಜೂರು ಮಾಡಲೇಬೇಕೆಂದು ಕೇಂದ್ರ ಸರ್ಕಾರವನ್ನು ಒತ್ತಾಯಿಸಿ ಇಂದು ನಡೆದ ಧರಣಿ ಸತ್ಯಾಗ್ರಹದಲ್ಲಿ, ಅಶೋಕ್ ಕುಮಾರ್ ಸಿ .ಕೆ ಜೈನ, ಡಾ.ಜಗದೀಶ್ ಪೂರ್ತಿಪಲ್ಲಿ, ಡಾ.ಎಸ್ ಎಸ್ ಪಾಟೀಲ್, ಜೈ ಭೀಮ್ ವಲ್ಲಭ, ಎಸ.ಹನುಮಂತಪ್ಪ ಮಾಸ್ಟರ್ ನರಸಪ್ಪ ಬಾಡಿಯಾಳ, ಶ್ರೀನಿವಾಸ ನಾಗಲದಿನ್ನಿ, ಗುರುರಾಜ ಕುಲಕರ್ಣಿ, ವಿನಯ ಚಿತ್ರಗಾರ, ಶ್ರೀನಿವಾಸ ಕಲವಲದೊಡ್ಡಿ, ಪ್ರಸನ್ನ ಆನಂಪಲ್ಲಿ, ಮಲ್ಲಿಕಾರ್ಜುನ, ಮಹಮ್ಮದ್ ಇಸಾಕ, ವಿಜಯ್ ರಾವ, ವಿಶ್ವನಾಥ. ಮುಂತಾದವರು ಭಾಗವಹಿಸಿದ್ದರು. ವಂದನೆಗಳೊಂದಿಗೆ

ಕಲಬುರಗಿ-ಬೆಂಗಳೂರು ವಿಮಾನಯಾನ ಪುನಾರಂಭಕ್ಕೆ ಸಿದ್ಧತೆ

ಕಲಬುರಗಿ,ಮೇ.10-

ವಾಣಿಜ್ಯ ಕಾರಣಗಳಿಂದ ಸ್ಥಗಿತಗೊಂಡಿದ್ದ ಕಲಬುರಗಿ-ಬೆಂಗಳೂರು ವಿಮಾನಯಾನ ಸೇವೆಯನ್ನು ಪುನರಾರಂಭಿಸಲು ರಾಜ್ಯ ಸರ್ಕಾರ ಮಹತ್ವದ ಕ್ರಮ ಕೈಗೊಂಡಿದ್ದು, ವೈಯಬಿಲಿಟಿ ಗ್ಯಾಪ್ ಫಂಡಿಂಗ್ (ವಿಜಿಎಫ್) ಯೋಜನೆಯಡಿ ಆರ್ಥಿಕ ನೆರವು ನೀಡಲು ಮುಂದಾಗಿದೆ.

ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ (ಕೆಕೆಆರ್‌ಡಿಬಿ) ಅಧ್ಯಕ್ಷ ಹಾಗೂ ಶಾಸಕ ಡಾ. ಅಜಯ್ ಸಿಂಗ್, ಕಲಬುರಗಿ-ಬೆಂಗಳೂರು ನಡುವಿನ ವಿಮಾನ ಸೇವೆ ಪುನರಾರಂಭಗೊಳ್ಳಲು ಅಗತ್ಯವಿರುವ ಎಲ್ಲಾ ಸಿದ್ಧತೆಗಳನ್ನು ಕೈಗೊಳ್ಳಲಾಗಿದೆ ಎಂದು ತಿಳಿಸಿದ್ದಾರೆ.

ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಕರ್ಯ ಅಭಿವೃದ್ಧಿ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಪಂಚಾಯತ್ ರಾಜ್ ಮತ್ತು ಐಟಿ ಇಲಾಖೆ ಸಚಿವರು, ಅರಣ್ಯ ಮತ್ತು ಪರಿಸರ ಇಲಾಖೆ ಸಚಿವರು ಹಾಗೂ ಪೌರಾಡಳಿತ ಮತ್ತು ಹಜ್ ಇಲಾಖೆ ಸಚಿವರು ಭಾಗವಹಿಸಿ ವಿಷಯದ ಕುರಿತು ವಿಸ್ತೃತ ಚರ್ಚೆ ನಡೆಸಿದ್ದಾರೆ ಎಂದು ವಿವರಿಸಿದರು.



ಗೃಹಿಣಿಯರು ಮಲ್ಲಮ್ಮರ ಆದರ್ಶಗಳನ್ನು ಅಳವಡಿಸಿಕೊಳ್ಳಿ -ಬೋಸರಾಜು

ಸಿರವಾರ.ಮೇ.10- ಒಬ್ಬ ಗೃಹಿಣಿಯಾಗಿ ಮನೆಯ ಎಲ್ಲ ಜವಾಬ್ದಾರಿಗಳನ್ನು ಸಮರ್ಥವಾಗಿ ನಿಭಾಯಿಸಿದ್ದಲ್ಲದೇ ಸಮಾಜಕ್ಕೂ ಮಾದರಿಯಾಗಬಲ್ಲ ಕೆಲಸ ಮಾಡಿದ ಕೀರ್ತಿ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಅವರಿಗೆ ಸಲ್ಲುತ್ತದೆ. ಆದರೆ, ತಮ್ಮ ಸಾತ್ವಿಕ ವಿಚಾರಗಳ ಮೂಲಕ ವಿಚಾರದ ಕಿಡಿ ಹೊತ್ತಿಸಿದ ಇವರಿಗೆ ಇತಿಹಾಸದಲ್ಲಿ ಸೂಕ್ತ ಸ್ಥಾನಮಾನ ನೀಡಿಲ್ಲ ಎಂದು ಸಣ್ಣನೀರಾವರಿ - ವಿಜ್ಞಾನ ತಂತ್ರಜ್ಞಾನ ಹಾಗೂ ಕೊಡಗು ಜಿಲ್ಲಾ ಉಸ್ತುವಾರಿ ಸಚಿವರಾದ ಎನ್ ಎಸ್ ಬೋಸರಾಜು ಹೇಳಿದರು.

ಪಟ್ಟಣದ ರಾಯಚೂರು - ಲಿಂಗಸ್ಗೂರು ರಸ್ತೆಯಲ್ಲಿರುವ

3 ನೇ ಪುಟಕ್ಕೆ

ಜಾನುವಾರುಗಳ ಸಾಗಣೆಗೆ ತಡೆ ಒಡ್ಡುವವರ ವಿರುದ್ಧ ಕ್ರಮಕ್ಕೆ ಒತ್ತಾಯ



ರಾಯಚೂರು : ಜಾನುವಾರು ಮಾರುಕಟ್ಟೆಯಲ್ಲಿ ಖರೀದಿಸಿದ ದನಕರು, ಕುರಿಗಳು ಹಾಗೂ ಸಾಗಣೆ ಮಾಡುವಾಗ ಕೆಲ ದುಷ್ಕರ್ಮಿಗಳು ಸಂಘಟನೆಗಳ ಹೆಸರಿನಲ್ಲಿ ತಡೆದು ದೌರ್ಜನ್ಯ ನಡೆಸುತ್ತಿದ್ದು, ಹಂತವರ ವಿರುದ್ಧ ಸೂಕ್ತ ಕ್ರಮಕೈಗೊಳ್ಳಬೇಕೆಂದು ಹಿಂದೂ ಮುಸ್ಲಿಂ ಏಕತಾ ಮಂಚ್ ಸಮಿತಿಯಿಂದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗೆ ಮನವಿ ಸಲ್ಲಿಸಿದರು.

ಜಿಲ್ಲೆಯಲ್ಲಿ ಖುರೇಶಿ ಸಮುದಾಯದವರು ಸಂತೆಯಲ್ಲಿ ದನಕರುಗಳು, ಕುರಿ ಮೇಕೆಗಳನ್ನೂ ಖರೀದಿಸಿ ಸಾಗಣೆ ಮಾಡುವ ಮೂಲಕ ಉಪ ಜೀವನ ನಡೆಸುತ್ತಿದ್ದಾರೆ. ವಯಸ್ಸಾ ದ ದನಗಳು, ಗೋವುಗಳನ್ನು ರೈತರು ಖುರೇಶಿ ಸಮುದಾಯಗಳಿಗೆ ಮಾರಾಟ ಮಾಡುತ್ತಿದ್ದಾರೆ. ಇದರಿಂದ ಇಬ್ಬರಲ್ಲೂ ವ್ಯವಹಾರ

3 ನೇ ಪುಟಕ್ಕೆ



ಹೇಮರೆಡ್ಡಿ ಮಲ್ಲಮ್ಮ ಸೌ.ಸ.ಸಂ. ಜಯಂತಿ ಆಚರಣೆ

ಸಿರವಾರ.ಮೇ.10-

ಪಟ್ಟಣದ ಹೇಮರೆಡ್ಡಿ ಮಲ್ಲಮ್ಮ ಸೌಹಾರ್ದ ಸಹಕಾರ ಸಂಘ ನಿಯಮಿತದಲ್ಲಿ ಹೇಮರೆಡ್ಡಿ ಮಲ್ಲಮ್ಮ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಪುಷ್ಪಾರ್ಪಣೆ ಮಾಡುವ ಮೂಲಕ ಜಯಂತಿ ಆಚರಣೆ ಮಾಡಲಾಯಿತು.

ಸಂಘದ ಅಧ್ಯಕ್ಷ ಅಯ್ಯನಗೌಡ ಐರೇಡ್ಡಿ, ಶಿವರಾಮರೆಡ್ಡಿ,ಬಸ್ಸ ಪ್ಪಗೌಡನಂದಾರೆಡ್ಡಿ,ನಾಗರಾಜಗೌಡ, ವಿಜಯಕುಮಾರ ಗುಡ್ಡದಮನೆ, ಡಾ.ಮಲ್ಲಿಕಾರ್ಜುನ,ಮಂಜುನಾಥ ಮೆಡಿಕಲ್,ಡಾ.ನಾಗರಾಜ, ಮಂಜುನಾಥ,ಕಿರಣ, ಜ್ಞಾನಮಿತ್ರ, ಹೆಚ್ ಕೆ ಅಮರೇಶ, ಚನ್ನವೀರಯ್ಯಸ್ವಾಮಿ, ಚನ್ನಯ್ಯಸ್ವಾಮಿ ಗಣದಿನ್ನಿ ಸೇರಿದಂತೆ ಇನ್ನಿತರರು ಇದರು

ಪ.ಪಂಚಾಯತಿಯಲ್ಲಿ ಹೇಮರೆಡ್ಡಿ ಮಲ್ಲಮ್ಮ ಜಯಂತಿ ಆಚರಣೆ

ಸ್ತ್ರೀ ಕುಲಕ್ಕೆ ಹೇಮರೆಡ್ಡಿ ಮಲ್ಲಮ್ಮ ಅನನ್ಯ ರತ್ನ : ಹಾಜಿಚೌದ್ರಿ




ಸಿರವಾರ.ಮೇ.10- ಮಹಾಸಾಧ್ವಿ, ಶಿವಶರಣೆ ಹೇಮರಡ್ಡಿ ಮಲ್ಲಮ್ಮ ನವರ ಆದರ್ಶ ಗುಣಗಳನ್ನು ಪ್ರತಿಯೊಬ್ಬರೂ ಜೀವನದಲ್ಲಿ ಅಳವಡಿಸಿಕೊಂಡು ಸುಖಿ ಕುಟುಂಬಿಗಳಾದಾಗ ಮಾತ್ರ ಜಯಂತಿ ಅರ್ಥಪೂರ್ಣವಾಗುತ್ತದೆ. ಪೂಜ್ಯನೀಯ ಸ್ಥಾನವನ್ನು ಹೊಂದಿದ ಶಿವಶರಣೆ ಹೇಮರಡ್ಡಿ ಮಲ್ಲಮ್ಮ ಸಮಾಜದ ಮಾರ್ಗದರ್ಶಕಿಯಾಗಿದ್ದಾರೆ, ತನಗಾಗಿ ಏನನ್ನೂ ಬೇಡದ ಹೇಮರೆಡ್ಡಿ ಮಲ್ಲಮ್ಮ ಸಮಾಜಕ್ಕಾಗಿ ಮತ್ತು ನಿಸ್ವಾರ್ಥದಿಂದ ಬದುಕಿದವಳು ಎಂದು ಪ.ಪಂಚಾಯತಿ ಅಧ್ಯಕ್ಷ ಹಾಜಿಚೌದ್ರಿ ಹೇಳಿದರು.

ಪಟ್ಟಣ ಪಂಚಾಯತಿಯಲ್ಲಿ ಹೇಮರಡ್ಡಿ ಮಲ್ಲಮ್ಮ ನ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಮಾಲಾರ್ಪಣೆ ಮಾಡಿ ನಂತರ ಮಾತನಾಡಿದ ಅವರು ಮಾನವ ಕುಲದ ಜೀವಲೋಕದ ಮಹಾತಾಯಿ ಹೇಮರೆಡ್ಡಿ ಮಲ್ಲಮ್ಮ. ಕೌಟುಂಬಿಕ ಕಲಹಗಳ ನಡುವೆ ಕಷ್ಟಗಳು ಅವಮಾನಗಳನ್ನು ಸಹಿಕೊಂಡು ಬದುಕಿನ ಮಹಾ ಸ್ವಾದಿ ಮತ್ತು ಮಾನವೀಯ ಮೌಲ್ಯಗಳನ್ನು ಅಳವಡಿಸಿಕೊಂಡ. ಧೀಮಂತ ಮಹಿಳೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಸದಸ್ಯರಾದ ಮೌಲಾಸಾಬ ವರ್ಚಸ್,ಬಸವರಾಜ ಸಾಹುಕಾರ, ಮಲ್ಲಪ್ಪ, ಗ್ಯಾನಪ್ಪ, ರಂಗನಾಥ ಭೋವಿ, ಸಮುದಾಯ ಸಂಘಟನೆ ಅಧಿಕಾರಿ ಹಂಪಯ್ಯಪಾಟೀಲ್, ಸುರೇಶ ಹೀರಾ ಇನ್ನಿತರರು ಇದರು.

ಶಶಿಕುಮಾರ್ ಹಡಪದ ಬಳ್ಳಾರಿ ಹಡಪದ ಸಮಾಜದಿಂದ ಸನ್ಮಾನ



ಸಿರವಾರ.ಮೇ10

ಪಟ್ಟಣದಲ್ಲಿ ಶ್ರೀ ಹಡಪದ ಅಪ್ಪಣ್ಣ ಸಮುದಾಯ ಭವನದಲ್ಲಿ ಅಖಿಲ ಕರ್ನಾಟಕ ಹಡಪದ ಅಪ್ಪಣ್ಣ ಸಮಾಜ ಸೇವಾ ಸಂಘದ ರಾಜ್ಯ ಸಂಘದ ಸಂಘಟನಾ ಕಾರ್ಯದರ್ಶಿ ಶಶಿಕುಮಾರ್ ಹಡಪದ ಬಳ್ಳಾರಿ ಇವರಿಗೆ ಸನ್ಮಾನಿಸಲಾಯಿತು .

ರಾಜ್ಯದ ಸಂಘಟನಾ ಕಾರ್ಯದರ್ಶಿ ಮಾತನಾಡಿದರು ಜಿಲ್ಲೆಯಲ್ಲಿ ರಾಜ್ಯದ ಸಂಘದ ಸದಸ್ಯತ್ವ ಅಭಿಯಾನ ಕಾರ್ಯಕ್ರಮ ಮಾಡಿ ,ಯುವಕರು ಸಮಾಜದ ಸೇವೆ ಮತ್ತು ಅಬೀವೃದ್ಧಿಗೆ ಹೆಚ್ಚು ಸಮಯವನ್ನು ಕೋಡಿ ಎಂದರು ಈ ಸಂದರ್ಭದಲ್ಲಿ ರಾಯಚೂರು ಜಿಲ್ಲೆಯ ಅಧ್ಯಕ್ಷರ ಬಸವರಾಜ ಹರವಿ, ಸಿರವಾರ ತಾಲೂಕ ಕಾರ್ಯಾಧ್ಯಕ್ಷ ಚಂದ್ರು ಶೇಖರ್ , ಪ್ರಧಾನ ಕಾರ್ಯದರ್ಶಿ ಅಮರೇಶ ಹಡಪದ ಕನಸಾವಿ ಸಮಾಜದ ಮುಖಂಡರಾದ ಬಸವರಾಜ ಚಿಂಚರಕಿ, ಶರಣಪ್ಪ ನಾಗನೂರು, ಅಯ್ಯಪ್ಪ ದೊಂಡಂಬಳಿ, ಬಸವರಾಜ ಹೀರಾ, ಶಿವರಾಜ್,ಶರಣಬಸವ ಹೀರಾ ಇತರರು ಭಾಗವಹಿಸಿದ್ದರು

ಜಿಲ್ಲಾಡಳಿತದಿಂದ ಹೇಮರೆಡ್ಡಿ ಮಲ್ಲಮ್ಮ ಜಯಂತಿ ಸರಳವಾಗಿ ಆಚರಣೆ



ರಾಯಚೂರು ಮೇ.10- ಜಿಲ್ಲಾಡಳಿತ, ಜಿಲ್ಲಾ ಪಂಚಾಯತ ಹಾಗೂ ಮಹಾನಗರ ಪಾಲಿಕೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ರಾಯಚೂರು ಇವರ ಸಂಯುಕ್ತಾಶ್ರ ಯದಲ್ಲಿ ಹಮ್ಮಿಕೊಂಡಿದ್ದ ಹೇಮ ರೆಡ್ಡಿ ಮಲ್ಲಮ್ಮ ಜಯಂತಿ ಇಂದು ಸರಳವಾಗಿ ಆಚರಿಸಲಾಯಿತು.

ಕರ್ನಾಟಕ ಸರ್ಕಾರದ ಯೋಜನೆ ಮತ್ತು ಸಾಂಖ್ಯಿಕ ಸಚಿವರಾಗಿದ್ದ ಡಿ.ಸುಧಾಕರ್ ಅವರ ನಿಧನದ ಹಿನ್ನೆಲೆಯಲ್ಲಿ ಸರ್ಕಾರವು ತೀವ್ರ ಸಂತಾನವನ್ನು ವ್ಯಕ್ತಪಡಿಸಿ ಮೂರು ದಿನಗಳ ಕಾಲ ರಾಜ್ಯ ದಾದ್ಯಂತ ಶೋಕಾಚರಣೆ ಆಚರಿಸಲಾಗುತ್ತಿರುವುದರಿಂದ ಸ್ತ್ರೀ ಕುಲದ ಆದರ್ಶ, ಮಹಾಸಾದ್ವಿ ಹೇಮರೆಡ್ಡಿ ಮಲ್ಲಮ್ಮ ಅವರ ಜಯಂತಿ ಕಾರ್ಯಕ್ರಮವನ್ನು ರಾಯಚೂರು ನಗರದ ಪಂಡಿತ ಸಿದ್ಧರಾಮ ಜಂಬಲದಿನ್ನಿ ರಂಗಮಂದಿರದಲ್ಲಿ ಮೇ.10ರ ರವಿವಾರ ದಂದು ಅತ್ಯಂತ ಸರಳ ಹಾಗೂ ಭಕ್ತಿ ಪೂರ್ವಕವಾಗಿ ಆಚರಿಸಲಾಯಿತು.

ಮಂಗಳವಾರಪೇಟೆ ವೀರ ಸಂಗಮೇಶ್ವರ ಮಹಾಸ್ವಾಮಿಗಳು, ಸೋಮವಾರಪೇಟೆ ಹಿರೇಮಠದ ಅಭಿನವ ರಾಚೋಟಿ ವೀರಶಿವಾ ಚಾರ್ಯ ಸ್ವಾಮೀಜಿ ಹಾಗೂ ಕರ್ನಾಟಕ ಸರಕಾರದ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಅಧ್ಯಕ್ಷರು ಹಾಗೂ ರಾಯಚೂರು ಗ್ರಾಮಾಂತರ ಕ್ಷೇತ್ರದ ಶಾಸಕರಾದ ಬಸನಗೌಡ ದದ್ದಲ್, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಗೌಡ, ರಾಯಚೂರು ವಿಭಾಗೀಯ ಸಹಾಯಕ ಆಯುಕ್ತರಾದ ಡಾ. ಹಂಪಣ್ಣ ಸಜ್ಜನ್, ರಾಯಚೂರು ತಹಶೀಲ್ದಾರ್ ಸುರೇಶ್ ವರ್ಮಾ ಅವರು ಶಿವಶರಣೆ ಹೇಮರಡ್ಡಿ ಮಲ್ಲಮ್ಮ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು.

ಈ ಸಂದರ್ಭದಲ್ಲಿ ರಾಯಚೂರು ಮಹಾನಗರ ಪಾಲಿಕೆಯ ಕಂದಾಯ ವಿಭಾಗದ ಉಪ ಆಯುಕ್ತರಾದ ಶರಣಪ್ಪ ಸತ್ಯಂಪೇಟೆ, ಸಿಪಿಐ ಉಮೇಶ್ ಕಾಂಬಳೆ, ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯ ಕ್ಷರಾದ ಕೃಷ್ಣ ಶಾವಂತಗೇರಾ, ಸಮಾಜದ ಮುಖಂಡರಾದ ಡಾ. ಬಸವಗೌಡ ಪಿ.ಪಾಟೀಲ್, ರಾಮ ನಗೌಡ ಏಗನೂರು, ಶರಣಪ್ಪ ಸೇರಿದಂತೆ ಸಮಾಜ ಇತರೆ ಮುಖಂ ಡರು, ಸಾರ್ವಜನಿಕರು ಇದ್ದರು.

ಇದಕ್ಕೂ ಮುಂಚೆ ಸಚಿವ ಡಿ.ಸುಧಾಕರ್ ಅವರ ನಿಧನದ ಹಿನ್ನೆಲೆಯಲ್ಲಿ ಐದು ನಿಮಿಷಗಳ ಕಾಲ ಮೌನಾಚರಣೆ ಮಾಡಲಾಯಿತು.

ಕಲಬುರಗಿ ಮೃಗಾಲಯ ಲೋಗೋ ಬಿಡುಗಡೆ

ಕಲಬುರಗಿ,ಮೇ10-

ಜಿಲ್ಲೆಯ ಚಿತ್ತಾಪುರ ತಾಲೂಕಿನ ಮಾಡಬೂಳ ಗ್ರಾಮದಲ್ಲಿ ಸುಮಾರು 43 ಎಕರೆ ಪ್ರದೇಶದ ವಿಸ್ತೀರ್ಣದಲ್ಲಿ 35 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣ ಮಾಡಲಾಗಿರುವ ಕಲಬುರಗಿ ಮೃಗಾಲಯವನ್ನು ಇದೇ ಮೇ 12ಕ್ಕೆ ಲೋಕಾರ್ಪಣೆ ಮಾಡಲಾಗುವುದು ಎಂದು ರಾಜ್ಯದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ಐ.ಟಿ-ಬಿ.ಟಿ ಹಾಗೂ ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.



ಕಲಬುರಗಿ ನಗರದ ಕಲ್ಯಾಣ ಕರ್ನಾಟಕ ಮಾನವ ಸಂಪನ್ಮೂಲ, ಕೃಷಿ ಹಾಗೂ ಸಾಂಸ್ಕೃತಿಕ ಸಂಘದ ಕಚೇರಿಯಲ್ಲಿ ಕಲಬುರಗಿ ಮೃಗಾಲಯದ ಲೋಗೊ ಬಿಡುಗಡೆ ಮಾಡಿ ಮಾತನಾಡಿದ ಅವರು, ವನ್ಯಜೀವಿ ಸಂರಕ್ಷಣಾ ಕಾಯ್ದೆ-1972ರ ಸೆಕ್ಷನ್ 38(1) ಅಡಿಯಲ್ಲಿ ಮೃಗಾಲಯ ಸ್ಥಾಪನೆಗೆ ಕೇಂದ್ರ ಮೃಗಾಲಯ ಪ್ರಾಧಿಕಾರದಿಂದ ಮತ್ತು ದೆಹಲಿಯ ಸೆಂಟ್ರಲ್ ಝೂ ಅಥಾರಿಟಿಯಿಂದ ಅನುಮತಿ ದೊರೆತಿರುವ ಹಿನ್ನೆಲೆಯಿಂದ ವಿವಿಧ ಸ್ಥಳದಿಂದ ಕಲಬುರಗಿ ಮೃಗಾಲಯಕ್ಕೆ ಪ್ರಾಣಿಗಳ ಸ್ಥಳಾಂತರ ಪ್ರಕ್ರಿಯೆ ನಡೆದಿದೆ ಎಂದರು.

ಹುಲಿ, ಸಿಂಹ ಸೇರಿದಂತೆ ಅನೇಕ ಪ್ರಾಣಿಗಳ ವೀಕ್ಷಣೆಗೆ ಈ ಭಾಗದಲ್ಲಿ ಅವಕಾಶ ಇರಲಿಲ್ಲ. ಹಿಂದೆ ತಾವು ಪ್ರವಾಸೋದ್ಯಮ ಸಚಿವನಾಗಿದ್ದಾಗ ಮಾಡಬೂಳ ಮೃಗಾಲಯ ಮಂಜೂರು ಮಾಡಿದೆ. ಇದೀಗ ಸದರಿ ಕಾಮಗಾರಿಗೆ ವೇಗ ನೀಡಿದ ಫಲವಾಗಿ ಮೃಗಾಲಯ ಲೋಕಾರ್ಪಣೆ ಹಂತಕ್ಕೆ ಬಂದಿದೆ. ಇದರಿಂದ ಪ್ರದೇಶದ ಮಕ್ಕಳು, ಸಾರ್ವಜನಿಕರು ಪ್ರಾಣಿಗಳ ವೀಕ್ಷಣೆಗೆ ದೂರದ ಉರಿಗೆ ಹೋಗುವುದು ತಪ್ಪಿದಲ್ಲದೆ ಸ್ಥಳೀಯವಾಗಿ ಪ್ರವಾಸೋದ್ಯಮ ಚೇತರಿಕೆಗೂ ಇದು ಕಾರಣವಾಗಲಿದೆ ಎಂದರು.

ಹೊಸ ಮೃಗಾಲಯದಲ್ಲಿ ನಿಶಾಚರ ಪ್ರಾಣಿಗಳಿಗೆ 6, ಭಾರತೀಯ ಪಕ್ಷಿಗಳಿಗೆ 10, ಸಣ್ಣ ಪಕ್ಷಿಗಳಿಗೆ 6, ಫೀಸಂಟ್‌ಗಳಿಗೆ 6, ಸಸ್ತನಿಗಳಿಗೆ 10, ಪ್ರೈವೇಟ್‌ಗಳಿಗೆ 4 ಶಾಖಾಹಾರಿ ಪ್ರಾಣಿಗಳಿಗೆ 6 ಹಾಗೂ ಉಭಯಚರ/ ಸರೀಸೃಪ ಪ್ರಾಣಿಗಳಿಗೆ 8 ಸೇರಿ ಒಟ್ಟು 56 ಜಾತಿಯ ಪ್ರಾಣಿಗಳಿಗೆ ಆವರಣಗಳು ನಿರ್ಮಾಣವಾಗಲಿದ್ದು, ಆಮೆ, ಘರಿಯಾಲ್, ಮೊಸಳೆ, ಚುಕ್ಕೆ ಜಿಂಕೆ, ಗೋಲ್ಡನ್ ಜಾಕಲ್, ಹುಲಿ, ಸಿಂಹ, ಸ್ಲೋತ್ ಕರಡಿ, ಜೀಬ್ರಾ, ಬಬೂನ್, ಲಂಗೂರು ಹಾಗೂ ವಿವಿಧ ಪಕ್ಷಿಗಳಿಗಾಗಿ ಒಟ್ಟು 23 ಆವರಣಗಳು ಈಗಾಗಲೆ ಪೂರ್ಣಗೊಂಡಿವೆ ಎಂದರು.

ಮೃಗಾಲಯಕ್ಕೆ ಆಗಮಿಸುವ ಸಾರ್ವಜನಿಕರಿಗೆ ಕುಡಿಯುವ ನೀರು, ಶೌಚಾಲಯ, ಶೆಡ್‌ಗಳು, ಬೆಂಚ್‌ಗಳು, ಉದ್ಯಾನ, ಮಕ್ಕಳ ಆಟದ ಪ್ರದೇಶ ಹೀಗೆ ಮೂಲಸೌಲಭ್ಯ ಕಲ್ಪಿಸಲಾಗಿದೆ. ಇದಲ್ಲದೆ ಮೃಗಾಲಯಕ್ಕೆ ಸುತ್ತ ಕಲ್ಲಿನ ಗೋಡೆ ಹಾಗೂ ಮುಳ್ಳು ತಂತಿ ಬೇಲಿ ನಿರ್ಮಾಣ ಮಾಡಿ ರಕ್ಷಿಸಲಾಗಿದೆ. ಟಿಕೇಟ್ ಕೌಂಟರ್ ಸಹಿತ ಪ್ರವೇಶದ್ವಾರ, ಮೃಗಾಲಯವನ್ನು ಮುಖ್ಯ ಹೆದ್ದಾರಿಗೆ ಸಂಪರ್ಕಿಸುವ 20 ಮೀಟರ್ ಅಗಲದ ರಸ್ತೆ, 2.5 ಕಿ.ಮೀ ಸೇವಾ ರಸ್ತೆ ಹಾಗೂ 1.3 ಕಿ.ಮೀ ಪೇಮ್ಸ್ ಪ್ರವಾಸಿಗರ ಮಾರ್ಗ, ವಾಹನ ನಿಲುಗಡೆ ವ್ಯವಸ್ಥೆ, ಭೂಗತ ಒಳಚರಂಡಿ ವ್ಯವಸ್ಥೆ, ವಿದ್ಯುತ್ ಸಂಪರ್ಕ ಪೂರ್ಣಗೊಂಡಿದೆ. ಆಸ್ಪತ್ರೆ ಹಾಗೂ ಅಡುಗೆಮನೆ ಕಟ್ಟಡಗಳು ಅಗತ್ಯ ಔಷಧಿ ಮತ್ತು ಸ್ಟೆಚರ್ ಫ್ರೀಜರ್ ಮುಂತಾದ ಉಪಕರಣಗಳೊಂದಿಗೆ ಸಜ್ಜುಗೊಳಿಸಿದೆ. ಮರಣೋತ್ತರ ಪರೀಕ್ಷಾ ಕೊಠಡಿ, ಪ್ರಾಣಿಗಳ ಅವಶೇಷ ವಿಲೇವಾರಿ ಘಟಕ ಹಾಗೂ ಕ್ಯಾರಂಟೈನ್ ಕೊಠಡಿ, ಆಡಳಿತ ಕಟ್ಟಡ ಹೀಗೆ ಎಲ್ಲಾ ರೀತಿಯಿಂದ ಮೂಲಸೌಕರ್ಯ ಇಲ್ಲಿ ಕಲ್ಪಿಸಲಾಗಿದೆ ಎಂದು ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ತಿಂಗಳೊಳಗೆ ಸಿಂಹ ಸೇರ್ಪಡೆ :

ಮುಂದಿನ ಒಂದು ತಿಂಗಳೊಳಗೆ ಮಾಡಬೂಳ ಮೃಗಾಲಯಕ್ಕೆ ಕಾಡಿನ ರಾಜ "ಸಿಂಹ" ಸೇರಿದಂತೆ ಸಾಂಬರ್, ರೆಡ್ ಜಂಗಲ್ ಫೌಲ್, ಪೈಥಾನ್ ಸ್ಥಳಾಂತರಿಸಲಾಗುತ್ತಿದೆ. 3 ತಿಂಗಳಲ್ಲಿ ಹುಲಿ, ಬಬೂನ್, ಸ್ಲೋತ್ ಕರಡಿ, ಕಿಂಗ್ ಕೋಬ್ರಾ ಹಾಗೂ 6 ತಿಂಗಳಲ್ಲಿ ಜೀಬ್ರಾ, ಘರಿಯಾಲ್ ಹಾಗೂ ಇತರೆ ಪಕ್ಷಿ ಮತ್ತು ಸರೀಸೃಪ ಪ್ರಭೇಧಗಳು ಮೃಗಾಲಯಕ್ಕೆ ಸೇರಲಿವೆ ಎಂದರು.

ಬೆಳಿಗ್ಗೆ 9.30 ರಿಂದ ಸಂಜೆ 5.30 ವೀಕ್ಷಣೆಗೆ ಲಭ್ಯ :

ಮೃಗಾಲಯವು ಬೆಳಿಗ್ಗೆ 9.30 ರಿಂದ ಸಂಜೆ 5.30 ವರೆಗೆ ತೆರೆಯಲಿದ್ದು, ಪ್ರಾಣಿ-ಪಕ್ಷಿಗಳ ವೀಕ್ಷಣೆಗೆ ಲಭ್ಯವಾಗಿರಲಿದೆ. ಪ್ರತಿ ಮಂಗಳವಾರ ರಜೆ ಇರಲಿದೆ. 12 ವರ್ಷ ಮೇಲ್ಪಟ್ಟವರಿಗೆ 75 ರೂ., 12 ವರ್ಷಕ್ಕಿಂತ ಕಡಿಮೆ ವಯಸ್ಸಿನವರಿಗೆ 40 ರೂ. ಹಾಗೂ ಸರ್ಕಾರಿ ಶಾಲಾ ವಿದ್ಯಾರ್ಥಿಗಳಿಗೆ 25 ರೂ. ಟಿಕೆಟ್ ದರ ನಿಗದಿ ಮಾಡಲಾಗಿದೆ. ಮೃಗಾಲಯದ ಟಿಕೆಟ್ ಕೌಂಟರ್‌ನಲ್ಲಿಯೆ ಟಿಕೆಟ್ ಪಡೆದು ವೀಕ್ಷಣೆ ಮಾಡಬಹುದಾಗಿದೆ ಎಂದರು.

ಕಾಫಿ ಟೇಬಲ್ ಪುಸ್ತಕ ಬಿಡುಗಡೆ :

ಜಿಲ್ಲೆಯ ಪ್ರವಾಸಿ ತಾಣಗಳನ್ನು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಪ್ರಚಾರಪಡಿಸುವ ನಿಟ್ಟಿನಲ್ಲಿ ಕಲಬುರಗಿ ಜಿಲ್ಲಾಡಳಿತ ಹಾಗೂ ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿಯು ವಿಶೇಷ ಆಸಕ್ತಿ ವಹಿಸಿ ಇದೇ ಮೊದಲ ಬಾರಿಗೆ ಜಿಲ್ಲೆಯ ಕಲೆ, ಸಂಸ್ಕೃತಿ, ಪರಂಪರೆ ಮತ್ತು ಇತಿಹಾಸವನ್ನು ಬಿಂಬಿಸುವ ಮತ್ತು ಜಿಲ್ಲೆಯ ಐತಿಹಾಸಿಕ, ಧಾರ್ಮಿಕ, ನೈಸರ್ಗಿಕ ಹಾಗೂ ಇತರೆ ಪ್ರವಾಸಿ ತಾಣಗಳ ಕುರಿತ ಮಾಹಿತಿ ನೀಡುವ ಕಾಫಿ ಟೇಬಲ್ ಪುಸ್ತಕ ಹೊರತಂದಿದ್ದು, ಇದೇ ಸಂದರ್ಭದಲ್ಲಿ ಸಚಿವ ಪ್ರಿಯಾಂಕ್ ಖರ್ಗೆ ಬಿಡುಗಡೆ ಮಾಡಿದರು. ಪ್ರವಾಸೋದ್ಯಮ ಇಲಾಖೆಯ ಉಪನಿರ್ದೇಶಕಿ ಬೇಬಿ ಮೋಗೇರಾ ಇದ್ದರು.

ಕಾರ್ಯಕ್ರಮದಲ್ಲಿ ಕಲಬುರಗಿ ದಕ್ಷಿಣ ಶಾಸಕ ಅಲ್ಲಮಪ್ರಭು ಪಾಟೀಲ, ವಿಧಾನ ಪರಿಷತ್ ಶಾಸಕ ತಿಪ್ಪಣ್ಣಪ್ಪ ಕಮಕನೂರ, ಜಗದೇವ ಗುತ್ತೇದಾರ, ಜೆಸ್ಕಾಂ ಅಧ್ಯಕ್ಷ ಪ್ರವೀಣ ಪಾಟೀಲ, ಕಲಬುರಗಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಮಜಹರ್ ಆಲಂ ಖಾನ್, ಗ್ಯಾರಂಟಿ ಅನುಷ್ಠಾನ ಪ್ರಾಧಿಕಾರದ ಜಿಲ್ಲಾಧ್ಯಕ್ಷ ಚಂದ್ರಿಕಾ ಪರಮೇಶ್ವರ, ಭೀಮರಾಯನಗುಡಿ ಕಾಡಾ ಅಧ್ಯಕ್ಷ ಬಾಬು ಹೊನ್ನನಾಯಕ್, ಜಿಲ್ಲಾಧಿಕಾರಿ ಬಿ.ಫೌಝಿಯಾ ತರನ್ನುಮ್, ಜಿಲ್ಲಾ ಪಂಚಾಯತ್ ಸಿ.ಇ.ಓ ಭಂವರ್ ಸಿಂಗ್ ಮೀನಾ, ಮಹಾನಗರ ಪಾಲಿಕೆ ಆಯುಕ್ತ ಅವಿನಾಶ ಶಿಂಧೆ, ಡಿ.ಸಿ.ಎಫ್ ಸುಮಿತ್ ಪಾಟೀಲ, ಇದ್ದರು.



ಸಾಮೂಹಿಕ ವಿವಾಹಗಳು ಬಸವಣ್ಣನ ಆದರ್ಶ ಮಾರ್ಗ : ಸಂಸದ ಇ.ತುಕಾರಾಂ

ಹರಪನಹಳ್ಳಿ,ಮೇ.10-

ಬಡವರ ಪಾಲಿಗೆ ಸಾಮೂಹಿಕ ವಿವಾಹಗಳು ವರವಾಗಿದ್ದು, ಇದು ಬಸವಣ್ಣ ಹಾಕಿಕೊಟ್ಟ ಆದರ್ಶ ಮಾರ್ಗವಾಗಿದೆ ಎಂದು ಇ. ತುಕಾರಾಂ ಅಭಿಪ್ರಾಯಪಟ್ಟರು.

ಪಟ್ಟಣದ ತೆಗ್ಗಿನಮಠದ ಚಂದ್ರಮೌಳೀಶ್ವರ ಸಭಾ ಮಂಟಪದಲ್ಲಿ ಲಿಂ. ಶ್ರೀ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳ 79ನೇ ಪುಣ್ಯಾರಾಧನೆ ಪ್ರಯುಕ್ತ ಶನಿವಾರ ನಡೆದ ಉಚಿತ ಸಾಮೂಹಿಕ ವಿವಾಹ, ಧರ್ಮಸಭೆ ಹಾಗೂ ಪ್ರಶಸ್ತಿ ಪ್ರಧಾನ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ತೆಗ್ಗಿನಮಠವು ಅನ್ನ ಮತ್ತು ಅಕ್ಷರ ದಾಸೋಹದ ಜೊತೆಗೆ ಪ್ರತಿ ವರ್ಷ ಉಚಿತ ಸಾಮೂಹಿಕ ವಿವಾಹಗಳನ್ನು ಆಯೋಜಿಸುತ್ತಿರುವುದು ಆರ್ಥಿಕವಾಗಿ ಹಿಂದುಳಿದ ಕುಟುಂಬಗಳಿಗೆ ಸಹಕಾರಿಯಾಗಿದೆ. ದುಂದು ವೆಚ್ಚದ ಮದುವೆಗಳಿಂದ ಮಧ್ಯಮ ಮತ್ತು ಬಡ ಕುಟುಂಬಗಳು ಸಾಲದ ಬಲೆಗೆ ಸಿಲುಕುತ್ತವೆ. ಇಂತಹ ಸಂದರ್ಭಗಳಲ್ಲಿ ಸಾಮೂಹಿಕ ವಿವಾಹಗಳು ಸಮಾಜಕ್ಕೆ ಮಾದರಿಯಾಗಿವೆ ಎಂದು ಹೇಳಿದರು.

ನವ ದಾಂಪತ್ಯ ಜೀವನಕ್ಕೆ ಕಾಲಿಡುತ್ತಿರುವ ಜೋಡಿಗಳು ಹಿರಿಯರನ್ನು ಗೌರವಿಸಿ, ಪರಸ್ಪರ ಅರ್ಥೈಸಿಕೊಂಡು ಸುಖೀ ಜೀವನ ಸಾಗಿಸಬೇಕು ಎಂದು ಅವರು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಮಾತನಾಡಿದ ಎಂ.ಪಿ. ಲತಾ ಮಲ್ಲಿಕಾರ್ಜುನ, ಗಂಡ-ಹೆಂಡತಿ ಜೀವನದ ಎರಡು ಚಕ್ರಗಳಂತೆ ಪರಸ್ಪರ ಸಹಕಾರದಿಂದ ಬದುಕು ಕಟ್ಟಿಕೊಳ್ಳಬೇಕು ಎಂದರು. ತೆಗ್ಗಿನಮಠದ ಪೀಠಾಧ್ಯಕ್ಷ ವರಸದ್ಯೋಜಾತ ಸ್ವಾಮೀಜಿ ಮಾತನಾಡಿ, ಸಾಮೂಹಿಕ ವಿವಾಹಗಳು ಜಾತಿ-ಮತ ಭೇದ ಮೀರಿದ ಸಂಸ್ಕೃತಿಯ ಪ್ರತೀಕವಾಗಿದ್ದು, ಅನೇಕ ಕುಟುಂಬಗಳ ಕನಸು ನನಸಾಗಿಸುತ್ತಿವೆ ಎಂದು ಹೇಳಿದರು. ಈ ವೇಳೆ 21 ಜೋಡಿಗಳು ಸಪ್ತಪದಿ ತುಳಿದು ದಾಂಪತ್ಯ ಜೀವನಕ್ಕೆ ಕಾಲಿಟ್ಟವು.

ಕಾರ್ಯಕ್ರಮದಲ್ಲಿ ರಾಮಘಟ್ಟ ಪುರವರ್ಗ ಮಠದ ರೇವಣಸಿದ್ಧ ಶಿವಾಚಾರ್ಯ ಮಹಾಸ್ವಾಮಿಗಳು ಸಾನಿಧ್ಯ ವಹಿಸಿದ್ದರು. ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಗಣ್ಯರನ್ನು ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಎಸ್.ಕೆ.ಎಂ ಪ್ರಾಜೆಕ್ಟ್ ಮ್ಯಾನೇಜರ್ ಅಶೋಕ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ವಿ.ಅಂಜಿನಪ್ಪ, ಟಿಎಂಎಇ ಉಪ ಕಾರ್ಯದರ್ಶಿ ಟಿ.ಎಂ.ವಿಜಯ್ ಕುಮಾರ್, ತಾಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಉದಯ ಶಂಕರ್, ಕುಮಾರಸ್ವಾಮಿ ಮಿನರಲ್ಸ್ ಜಿ.ಎಂ.ಚಂದ್ರಕಾಂತ್ ಪಾಟೀಲ್, ಜ್ಯೋತಿಷ್ಯ ತಜ್ಞ ಲಿಂಗನಾಯಕನಹಳ್ಳಿ ರಾಜಣ್ಣ, ಜ್ಞಾನಗಂಗೋತ್ರಿ ಆಡಳಿತಾಧಿಕಾರಿ ಟಿ.ಎಂ.ಪ್ರತೀಕ್, ಅಂಜುಮನ್ ಸಂಸ್ಥೆಯ ನೂರ್ ಅಹ್ಮದ್, ಟಿ.ಎಂ.ವಿಶ್ವನಾಥ್, ಕೆ.ಎಂ.ಗುರುಸಿದ್ದಯ್ಯ, ಕೆ.ಎಂ.ಶಿವಕುಮಾರ ಸ್ವಾಮಿ, ಟಿ.ಎಂ.ವೀರೇಂದ್ರ, ಗುತ್ತಿಗೆದಾರ ಎ.ಕರಿಬಸವರಾಜ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಹೊಸ ಕೈಗಾರಿಕಾ ವಸಾಹತು ಯೋಜನೆಗೆ ಸಚಿವ ಸಂಪುಟ ಸಭೆಯಲ್ಲಿ 200 ಕೋಟಿ ರೂ. ಅನುಮೋದನೆ: ಕೆಕೆಆರ್‌ಡಿಬಿ ಅಧ್ಯಕ್ಷ ಡಾ.ಅಜಯ್

ಕಲಬುರಗಿ ,ಮೇ.10-

ಯಾದಗಿರಿ ಮತ್ತು ಕಲಬುರಗಿ ಎರಡು ಜಿಲ್ಲೆಗಳಲ್ಲಿ ಒಟ್ಟು 210. 58 ಎಕರೆ ಪ್ರದೇಶದಲ್ಲಿ ಹೊಸ ಕೈಗಾರಿಕಾ ವಸಾಹತುಗಳನ್ನು ಅಭಿವೃದ್ಧಿ ಪಡಿಸಲು ಉದ್ದೇಶಿಸಲಾಗಿದ್ದು, ಇದಕ್ಕಾಗಿ ಒಟ್ಟು 200.07 ಕೋಟಿ ರೂ. ಗಳ ವೆಚ್ಚದ ಕ್ರಿಯಾಯೋಜನೆಯನ್ನು ಸಿದ್ಧಪಡಿಸಲಾಗಿದ್ದು ಸಚಿವ ಸಂಪುಟ ಸಭೆ ಅನುಮೋದಿಸಿದೆ ಎಂದು ಕೆಕೆಆರ್‌ಡಿಬಿ ಅಧ್ಯಕ್ಷ ಡಾ.ಅಜಯ್ ಸಿಂಗ್ ಹೇಳಿದ್ದಾರೆ.



ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ (ಕೆಕೆಆರ್‌ಡಿಬಿ) ಮತ್ತು ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ

ನಿಗಮ (ಕೆಎಸ್‌ಎಸ್‌ಐಡಿಸಿ) ಸಹಯೋಗ ದಲ್ಲಿ ಬೃಹತ್ ಕೈಗಾರಿಕಾ ಚಟುವಟಿಕೆ ಗಳಿಗೆ ವೇಗ ನೀಡಲು ಈ ಯೋಜನೆ ಹಮ್ಮಿಕೊಳ್ಳಲಾಗಿದೆ ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಲಬುರಗಿ ಜಿಲ್ಲೆಯ ನಂದೂರು-ಕೆ ಬಳಿ ಸುಮಾರು 62.58 ಎಕರೆ ವಿಸ್ತೀರ್ಣದಲ್ಲಿ ಹೊಸ ಕೈಗಾರಿಕಾ ವಸಾಹತು ನಿರ್ಮಾಣವಾಗಲಿದೆ. ಇದರ ಒಟ್ಟು ಅಭಿವೃದ್ಧಿ ವೆಚ್ಚ 61.26 ಕೋಟಿ ರೂ. ಗಳಾಗಿದ್ದು, ಇದರಲ್ಲಿ ಕೆ.ಕೆ.ಆರ್.ಡಿ.ಬಿ ಮತ್ತು ಕೆ.ಎಸ್.ಎಸ್.ಐ.ಡಿ.ಸಿ ತಲಾ ಶೇ. 50 ರಷ್ಟು ಅನುದಾನವನ್ನು ಹಂಚಿಕೊಳ್ಳಲಿವೆ.

ಯೋಜನೆಯ ಪ್ರಮುಖ ಅಂಶಗಳು :

ಯಾದಗಿರಿ ಜಿಲ್ಲೆಯಲ್ಲಿ ಎರಡು ಪ್ರಮುಖ ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಯಾದಗಿರಿ ತಾಲ್ಲೂಕಿನಲ್ಲಿ 100 ಎಕರೆ ಪ್ರದೇಶದಲ್ಲಿ ಕೈಗಾರಿಕಾ ವಸಾಹತು ಅಭಿವೃದ್ಧಿ ಪಡಿಸಲಾಗುತ್ತಿದ್ದು, ಇದಕ್ಕೆ 96.25 ಕೋಟಿ ರೂ.

ವೆಚ್ಚವಾಗಲಿದೆ. ಶಹಾಪುರ ತಾಲ್ಲೂಕಿನ ಹಳಿಸಾಗರ ಗ್ರಾಮದ ಬಳಿ 48 ಎಕರೆ ಪ್ರದೇಶ ದಲ್ಲಿ 42.56 ಕೋಟಿ ರೂ. ವೆಚ್ಚದಲ್ಲಿ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಗೊಳ್ಳಲಿದೆ.

ಈ ಯೋಜನೆಗಳಿಗೆ ಬೇಕಾಗುವ ಅಭಿವೃದ್ಧಿ ವೆಚ್ಚದಲ್ಲಿ 100 ಕೋಟಿ ರೂ.ಗಳನ್ನು ಕೆ.ಕೆ.ಆರ್.ಡಿ.ಬಿ ಭರಿಸಲಿದ್ದು, ಉಳಿದ 100.07 ಕೋಟಿ ರೂ. ಗಳನ್ನು ಕೆ.ಎಸ್.ಎಸ್.ಐ.ಡಿ.ಸಿ ಭರಿಸಲಿದೆ. 2025-26ನೇ ಸಾಲಿನ ಅಭಿವೃದ್ಧಿ ಕೆಲಸಗಳಿಗಾಗಿ ಈ ಅನುದಾನ ಮೀಸಲಿಡಲಾಗಿದೆ ಎಂದು ವಿವರಿಸಿದ್ದಾರೆ.

ಕೈಗಾರಿಕಾ ನಿವೇಶನಗಳ ಹಂಚಿಕೆಯಲ್ಲಿ ಸರ್ಕಾರದ ನಿಯಮದಂತೆ ಸಾಮಾನ್ಯ ವರ್ಗ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಪ್ರತ್ಯೇಕವಾಗಿ ಭೂಮಿ ಮತ್ತು ಅನುದಾನವನ್ನು ಹಂಚಿಕೆ ಮಾಡಲಾಗಿದೆ.

ನಿವೇಶನಗಳ ಹಂಚಿಕೆಯ ಸಂದರ್ಭದಲ್ಲಿ ಸರ್ಕಾರದ ಆದೇಶ ಸಂಖ್ಯೆ (ಸಿಐ 76, 2019 ದಿನಾಂಕ 22-11-2023) ರನ್ವಯ ಪಾರದರ್ಶಕ ನಿಯಮಗಳನ್ನು ಪಾಲಿಸಲಾಗುತ್ತದೆ ಎಂದಿದ್ದಾರೆ.

ಈ ಯೋಜನೆಯಿಂದಾಗಿ ಕಲ್ಯಾಣ ಕರ್ನಾಟಕ ಭಾಗದಲ್ಲಿ ಸಣ್ಣ ಕೈಗಾರಿಕೆಗಳಿಗೆ ಹೆಚ್ಚಿನ ಉತ್ತೇಜನ ಸಿಗಲಿದ್ದು, ಸ್ಥಳೀಯರಿಗೆ ಉದ್ಯೋಗಾವಕಾಶಗಳು ಸೃಷ್ಟಿಯಾಗಲಿವೆ ನಿರೀಕ್ಷೆ ವ್ಯಕ್ತಪಡಿಸಿದ್ದಾರೆ.

ಕಲಬುರಗಿ ರೊಟ್ಟಿ ವಿದೇಶಕ್ಕೆ ರಫ್ತು ಹೆಮ್ಮೆಯ ವಿಷಯ : ಸಚಿವ ಪ್ರಿಯಾಂಕ್ ಖರ್ಗೆ

ಕಲಬುರಗಿ,ಮೇ.10-

ಸ್ಥಳೀಯವಾಗಿ ಸ್ವಸಹಾಯ ಸಂಘಗಳ ಮೂಲಕ ತಯಾರಿಸುವ ಕಲಬುರಗಿ ರೊಟ್ಟಿ ಇದೀಗ ವಿದೇಶದಲ್ಲಿ ಲಭ್ಯವಾಗುತ್ತಿದೆ. ಒಂದೂವರೆ ವರ್ಷದಲ್ಲೇ ಕಲಬುರಗಿ ರೊಟ್ಟಿ ವಿದೇಶಿ ಮಾರುಕಟ್ಟೆಯಲ್ಲಿ ಸಿಗುವಂತೆ ಕ್ರಮವಹಿಸಲಾಗಿದ್ದು, ಇದು ಹೆಮ್ಮೆಯ ವಿಷಯವಾಗಿದೆ ಎಂದು ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ಶನಿವಾರ ಕಲಬುರಗಿ ನಗರದ ಅರಿವಿನ ಮನೆ ಸಭಾಂಗಣದಲ್ಲಿ ಏರ್ಪಡಿಸಲಾಗಿದ್ದ ಕಾರ್ಯಕ್ರಮದಲ್ಲಿ ಆಸ್ಟ್ರೇಲಿಯಾ, ಅಮೆರಿಕಾ ಹಾಗೂ ಕೆನಡ ದೇಶಗಳಿಗೆ ರಫ್ತು ಮಾಡಲು ತಯಾರಿಸಿದ ಬಾಕ್ಸ್ ಗಳಿಗೆ ಹಸಿರು ನಿಶಾನೆ ತೋರಿಸಿ, ಅಂಚೆ ಮೂಲಕ ವಿದೇಶಕ್ಕೆ ಅಂಚೆ ಮೂಲಕ ರಫ್ತು ಮಾಡಲು ಅಂಚೆ ಸಿಬ್ಬಂದಿಗೆ ಹಸ್ತಾಂತರ ಮಾಡಿ ಅವರು ಮಾತನಾಡುತ್ತಿದ್ದರು. ಒಂದೂವರೆ ವರ್ಷದ ಹಿಂದೆ ಕಲಬುರಗಿ ರೊಟ್ಟಿ ಹೆಸರಿನಲ್ಲಿ ಬ್ರ್ಯಾಂಡ್ 100 ರೊಟ್ಟಿ ಸ್ವಸಹಾಯ ಸಂಘಗಳ ಮೂಲಕ ಒಟ್ಟು 1ಸಾವಿರ ಮಹಿಳೆಯರು ರೊಟ್ಟಿ ತಯಾರಿಸುತ್ತಿದ್ದಾರೆ. ಇದಕ್ಕೆ ಸಂಬಂಧಿಸಿದಂತೆ ಕಲಬುರಗಿ ರೊಟ್ಟಿ ಪುಣೆ ಮೂಲದ ರಫ್ತು ಕಂಪೆನಿಯ ಮೂಲಕ ಅಮೆರಿಕಾ, ಕೆನಡಾ ಹಾಗೂ ಆಸ್ಟ್ರೇಲಿಯಾ ದೇಶಗಳಿಗೆ ರಫ್ತು ಮಾಡಲು ಕ್ರಮವಹಿಸಲಾಗಿದೆ. ಇದು ನಮ್ಮ ಕಲಬುರಗಿಯ ಹೆಮ್ಮೆಯ ವಿಷಯವಾಗಿದೆ ಎಂದು ಅವರು ನುಡಿದರು.

ವಿದೇಶಗಳಿಗೆ ರಫ್ತು ಮಾಡಲು ತಯಾರಿಸಿದ ಪ್ಯಾಕ್‌ಗಳನ್ನು ಹಾಗೂ ಭಾರತೀಯ ಅಂಚೆ ಮೂಲಕವೂ ಕಳಿಸಲು ತಯಾರಿಸಿ ಪ್ಯಾಕ್‌ಗಳಿಗೆ ಹಸಿರು ನಿಶಾನೆ



ತೋರಿಸಿದ ಪ್ರಿಯಾಂಕ್ ಖರ್ಗೆ, ಪ್ರತಿ ತಿಂಗಳು ಅಮೆರಿಕಾ ಹಾಗೂ ಆಸ್ಟ್ರೇಲಿಯಾಗೆ ತಲಾ 10 ಸಾವಿರ ಹಾಗೂ ಕೆನಡಾ ದೇಶಕ್ಕೆ 5 ಸಾವಿರ ಕಲಬುರಗಿ ಜೋಳದ ರೊಟ್ಟಿ ರಫ್ತು ಮಾಡಲು ಕ್ರಮವಹಿಸಲಾಗಿದೆ. ಮುಂದಿನ ದಿನಗಳಲ್ಲಿ ಈ ಸಂಖ್ಯೆ ಹೆಚ್ಚಾಗಲಿದೆ ಎಂದು ಅವರು ತಿಳಿಸಿದರು.

ಕಲಬುರಗಿ ರೊಟ್ಟಿ ವಿವರ :

ಕಲಬುರಗಿ ರೊಟ್ಟಿಯನ್ನು ಕಲಬುರಗಿ ರೊಟ್ಟಿ ಬ್ರಾಂಡ್ ಮೂಲಕ ಅಮೇಝಾನ್, ಕಲಬುರಗಿ ರೊಟ್ಟಿ ವೆಬ್‌ಸೈಟ್, ಫ್ರಾಂಚೈಸಿ ಹಾಗೂ ಲೋಕಲ್ ಮಾರ್ಕೆಟ್ ಮೂಲಕ ಮಾರಾಟ ಮಾಡಲಾಗುತ್ತಿದೆ. ಕಲಬುರಗಿ ರೊಟ್ಟಿ ಬ್ರ್ಯಾಂಡ್‌ನಲ್ಲಿ 100ಕ್ಕಿಂತ ಹೆಚ್ಚು ಸ್ವಸಹಾಯ ಸಂಘಗಳು ಹಾಗೂ 1ಸಾವಿರಕ್ಕಿಂತ ಹೆಚ್ಚು ಮಹಿಳೆಯರು ಈ ಯೋಜನೆಯ ಲಾಭ ಪಡೆಯುತ್ತಿದ್ದಾರೆ.

ಕಲಬುರಗಿ ರೊಟ್ಟಿ ಉತ್ಪಾದನೆ ಮಾಡುವ ಮಹಿಳೆಯರು ಪ್ರತಿ ತಿಂಗಳು 15 ರಿಂದ 20 ಸಾವಿರ ರೂ. ಗಳವರೆಗೆ ಆದಾಯ ಗಳಿಸುತ್ತಿದ್ದು, ಮದುವೆ, ಇತರೆ ಸಮಾರಂಭಗಳಿಂದ ಹೆಚ್ಚು ಆದಾಯಗಳಿಸುತ್ತಿದ್ದಾರೆ. ಕಲಬುರಗಿ ರೊಟ್ಟಿಯನ್ನು ದೇಶದ ಎಲ್ಲ ಕಡೆಗಳಲ್ಲಿ ಮಾರಾಟ ಮಾಡುತ್ತಿದ್ದು, ವಿದೇಶಗಳಿಗೆ ಕಳುಹಿಸುವ ಪ್ರಯತ್ನ ಫಲಕಾರಿಯಾಗಿದೆ.

ಕಲಬುರಗಿ ರೊಟ್ಟಿಯನ್ನು ವಿದೇಶಗಳಿಗೆ (ಆಸ್ಟ್ರೇಲಿಯಾ, ಕೆನಡಾ ಹಾಗೂ ಯುಎಸ್‌ಎ) ರಫ್ತು ಮಾಡಲು ಪುಣೆ ಮೂಲದ ಅಶ್ರಮ್ ಟ್ರೇಡರ್ಸ್ ಅವರೊಂದಿಗೆ ಮಾತುಕತೆ ನಡೆದಿದ್ದು, ಮೊದಲ ಹಂತದಲ್ಲಿ ಒಂದು ವರ್ಷಕ್ಕೆ ಒಂದು ಲಕ್ಷ ರೊಟ್ಟಿಗಳನ್ನು ಆಸ್ಟ್ರೇಲಿಯಾ ಹಾಗೂ ಯುಎಸ್‌ಎಗೆ ರಫ್ತು ಮಾಡಲಾಗುವುದು. ಪ್ರತಿ ತಿಂಗಳು 10 ಸಾವಿರದಿಂದ 25ಸಾವಿರ ರೊಟ್ಟಿಗಳನ್ನು ರಫ್ತು ಮಾಡಲಾಗುವುದು. ಈಗಾಗಲೇ ಜಿಲ್ಲಾಡಳಿತದಿಂದ ಆಶ್ರಮ್ ಟ್ರೇಡರ್ ಜತೆಗೆ ಒಪ್ಪಂದ ಸಿದ್ಧಪಡಿಸಲಾಗಿದೆ.

ಇದರಿಂದಾಗಿ ಕಲಬುರಗಿ ರೊಟ್ಟಿ ಉತ್ಪಾದಕರಿಗೆ ಹೆಚ್ಚಿನ ಆದಾಯ ಸಿಗಲಿದೆ. ಸದ್ಯ ಮಾರುಕಟ್ಟೆಯಲ್ಲಿ ಒಂದು ರೊಟ್ಟಿಗೆ 10 ರೂ. ನಿಂದ 12 ರೂ. ಬೆಲೆ ಇದ್ದು, ಈ ರಫ್ತಿನಿಂದಾಗಿ ವಿದೇಶದಲ್ಲಿ ಒಂದು ರೊಟ್ಟಿಗೆ 25 ರೂ. ನಿಂದ 30ರೂ. ಬೆಲೆ ಸಿಗಲಿದ್ದು, ಶೇ.0ರಿಂದ ಶೇ.100ರಷ್ಟು ಹೆಚ್ಚಿನ ಆದಾಯ ಕಲಬುರಗಿ ರೊಟ್ಟಿ ಉತ್ಪಾದಕರಿಗೆ (ಮಹಿಳೆಯರಿಗೆ) ದೊರಕಲಿದೆ.

ಕಲಬುರಗಿ ರೊಟ್ಟಿ ಉತ್ಪಾದನೆಯ ಜೊತೆಗೆ ಗಾಳಿಯೊಂದಿಗೆ ಬಿಗಿಯಾದ ಪ್ಯಾಕ್ ಮಾಡುವ ಯಂತ್ರವನ್ನು ಖರೀದಿಸಲು ಎಚ್‌ಡಿಎಫ್‌ಸಿ ಬ್ಯಾಂಕ್‌ನ ಸಿಎಸ್‌ಆರ್ ಅನುದಾನದಲ್ಲಿ 55 ಲಕ್ಷ ರೂ. ಒದಗಿಸಿದ್ದು, ಅದಕ್ಕೆ ಬೇಕಾಗುವ ಮೂಲಭೂತ ಸೌಲಭ್ಯವನ್ನು ಡಿಎಂಎಫ್ ಯೋಜನೆಯಡಿ 32ಲಕ್ಷ ರೂ.ವೆಚ್ಚದಲ್ಲಿ ಜಿಲ್ಲಾ ಕೃಷಿ ತರಬೇತಿ ಕೇಂದ್ರ, ಕೊಟನೂರ, ಕಲಬುರಗಿ ಇಲ್ಲಿ ಸಿದ್ಧವಾಗುತ್ತಿದೆ. ಸದರಿ ಘಟಕ ಸಿದ್ಧವಾದ ನಂತರ ಕಲಬುರಗಿ ರೊಟ್ಟಿ ರಫ್ತು ಮಾಡಲು ಹೆಚ್ಚು ಪ್ರೋತ್ಸಾಹ ದೊರಕಲಿದೆ. ಅಲ್ಲದೆ, ಕಲಬುರಗಿ ರೊಟ್ಟಿಯ ಗುಣಮಟ್ಟ ಹೆಚ್ಚಾಗಲಿದೆ. ಕೆಲವೇ ದಿವಸಗಳಲ್ಲಿ ಪ್ಯಾಕ್ ಮಾಡುವ ಘಟಕವನ್ನು ಉದ್ಘಾಟಿಸಲಾಗುವುದು ಎಂದು ತಿಳಿಸಲಾಗಿದೆ.

ಕಾರ್ಯಕ್ರಮದಲ್ಲಿ ಕಲಬುರಗಿ ದಕ್ಷಿಣ ಶಾಸಕ ಅಲ್ಲಮಪ್ರಭು ಪಾಟೀಲ, ವಿಧಾನ ಪರಿಷತ್ ಶಾಸಕ ತಿಪ್ಪಣ್ಣಪ್ಪ ಕಮಕನೂರ, ಜಗದೇವ ಗುತ್ತೇದಾರ, ಜೆಸ್ಕಾಂ ಅಧ್ಯಕ್ಷ ಪ್ರವೀಣ ಪಾಟೀಲ, ಕಲಬುರಗಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಮಜಹರ್ ಆಲಂ ಖಾನ್, ಗ್ಯಾರಂಟಿ ಅನುಷ್ಠಾನ ಪ್ರಾಧಿಕಾರದ ಜಿಲ್ಲಾಧ್ಯಕ್ಷ ಚಂದ್ರಿಕಾ ಪರಮೇಶ್ವರ, ಭೀಮರಾಯನಗುಡಿ ಕಾಡಾ ಅಧ್ಯಕ್ಷ ಬಾಬು ಹೊನ್ನನಾಯಕ್, ಜಿಲ್ಲಾಧಿಕಾರಿ ಬಿ.ಫೌಝಿಯಾ ತರನ್ನುಮ್, ಜಿಲ್ಲಾ ಪಂಚಾಯತ್ ಸಿ.ಇ.ಓ ಭಂವರ್ ಸಿಂಗ್ ಮೀನಾ, ಮಹಾನಗರ ಪಾಲಿಕೆ ಆಯುಕ್ತ ಅವಿನಾಶ ಶಿಂಧೆ, ಡಿ.ಸಿ.ಎಫ್ ಸುಮಿತ್ ಪಾಟೀಲ, ಅಸ್ತಮ್ ಟ್ರೇರ್ಸ್ ಮಾಲೀಕ ರಮೇಶ ಕಡಗಂಚಿ ಇದ್ದರು.

ವರ್ಷಾಂತ್ಯಕ್ಕೆ ಗ್ರಾಮ ಪಂಚಾಯತ್ ಚುನಾವಣೆ : ಸಚಿವ ಪ್ರಿಯಾಂಕ್ ಖರ್ಗೆ

ಕಲಬುರಗಿ ,ಮೇ.10-

ಪ್ರಸಕ್ತ ಕ್ಯಾಲೆಂಡರ್ ವರ್ಷದ ಅಂತ್ಯದೊಳಗೆ ಗ್ರಾಮ ಪಂಚಾಯತ್ ಚುನಾವಣೆ ನಡೆಸಿ ಸಂಪೂರ್ಣ ಚುನಾವಣೆ ಪ್ರಕ್ರಿಯೆ ಪೂರ್ಣಗೊಳಿಸಲಾಗುವುದು ಎಂದು ರಾಜ್ಯದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ಐ.ಟಿ-ಬಿ.ಟಿ ಹಾಗೂ ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.



ಕಲಬುರಗಿ ನಗರದ ಕಲ್ಯಾಣ ಕರ್ನಾಟಕ ಮಾನವ ಸಂಪನ್ಮೂಲ, ಕೃಷಿ ಹಾಗೂ ಸಾಂಸ್ಕೃತಿಕ ಸಂಘದ ಕಚೇರಿಯಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಗ್ರಾಮ ಪಂಚಾಯತ್ ಗಡಿ ಗುರುತಿಸುವ ಕಾರ್ಯಕ್ಕೆ ಆಕ್ಷೇಪಣೆ ಸಲ್ಲಿಸಲು ಕೊನೆ ದಿನ ಮುಗಿದಿದ್ದು, ಶೀಘ್ರದಲ್ಲೇ ಚುನಾವಣೆ ನಡೆಸಲಾಗುವುದು. ಇದಾದ ನಂತರ ತಾಲೂಕು ಪಂಚಾಯತ್, ಜಿಲ್ಲಾ ಪಂಚಾಯತ್ ಚುನಾವಣೆ ಸಹ ನಡೆಸಲಾಗುವುದು ಎಂದರು.

ಜಿಲ್ಲೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಕುರಿತಂತೆ ಪತ್ರಕರ್ತರ ಪ್ರಶ್ನೆಗೆ ಉತ್ತರಿಸಿದ ಅವರು, ಕುಡಿಯುವ ನೀರಿಗೆ ಯಾವುದು ಅನುದಾನ ಕೊರತೆ ಇಲ್ಲ. ನೀರಿನ ಸಮಸ್ಯೆ ಇರುವ 21 ಗ್ರಾಮಗಳಲ್ಲಿ ಹೊಸದಾಗಿ ಬೋರ್ ವೆಲ್ ಕೊರೆಯಲಾಗಿದೆ. 4 ಹಳ್ಳಿಗಳಿಗೆ ಟ್ಯಾಂಕರ್ ಮೂಲಕ ನೀರು ಪೂರೈಕೆ ಮಾಡಲಾಗುತ್ತಿದೆ. ಪ್ರತಿ ಜಿಲ್ಲೆಗೆ 5 ಕೋಟಿ ರೂ. ಅನುದಾನ ಒದಗಿಸಿದೆ. ಇದು ಖರ್ಚು ಮಾಡಿದರೆ ಹೆಚ್ಚಿನ ಅನುದಾನ ಸಹ ನೀಡಲಾಗುವುದು.

ಇನ್ನು ಕೆ.ಕೆ.ಆರ್.ಡಿ.ಬಿ ಮಂಡಳಿಯಿಂದ 17.30 ಕೋಟಿ ರೂ. ಅನುದಾನ ಸಹ ನೀಡಲಾಗಿದೆ. ಶಾಸಕರ ನೇತೃತ್ವದಲ್ಲಿ ಟಾಸ್ಕ್ ಫೋರ್ಸ್ ರಚನೆ ಮಾಡಿದ್ದು, ಶಾಸಕರ ನಿರ್ಧರಿಸಿದಂತೆ ಕುಡಿಯುವ ನೀರು ಕಾಮಗಾರಿಗಳು ನಡೆಯಲಿವೆ ಎಂದರು.

ಬೇಸಿಗೆಯಲ್ಲಿ ಜಿಲ್ಲೆಯ ಕುಡಿಯುವ ನೀರಿನ ಸಮಸ್ಯೆ ಕುರಿತು ಈಗಾಗಲೇ ಎಂ.ವೈ.ಪಾಟೀಲ, ಬಿ.ಆರ್.ಪಾಟೀಲ ಅವರೊಂದಿಗೆ ಸೇರಿ ಉಪಮುಖ್ಯಮಂತ್ರಿ ಮತ್ತು ಜಲಸಂಪನ್ಮೂಲ ಸಚಿವ ಡಿ.ಕೆ.ಶಿವಕುಮಾರ ಅವರಿಗೆ ಭೇಟಿಯಾಗಿ ಮಹಾರಾಷ್ಟ್ರದಿಂದ ಭೀಮಾ ನದಿಯಿಂದ ಕುಡಿಯುವ ನೀರು ಬಿಡುಗಡೆಗೆ ಒತ್ತಾಯ ಮಾಡಲಾಗಿದೆ ಎಂದರು.


ರಾಜ್ಯದಲ್ಲಿ ಸಚಿವ ಸಂಪುಟ ವಿಸ್ತರಣೆ ಕುರಿತು ಮಾತನಾಡಿದ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಪಕ್ಷದ ಹೈಕಮಾಂಡ್ ಸೂಕ್ತ ಸಮಯದಲ್ಲಿ ನಿರ್ಧರಿಸಲಿದೆ ಎಂದು ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದರು.

ಕಲಬುರಗಿ ದಕ್ಷಿಣ ಶಾಸಕ ಅಲ್ಲಮಪ್ರಭು ಪಾಟೀಲ, ವಿಧಾನ ಪರಿಷತ್ ಶಾಸಕ ತಿಪ್ಪಣ್ಣಪ್ಪ ಕಮಕನೂರ, ಜೆಸ್ಕಾಂ ಅಧ್ಯಕ್ಷ ಪ್ರವೀಣ ಪಾಟೀಲ, ಕಲಬುರಗಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಮಜಹರ್ ಆಲಂ ಖಾನ್, ಗ್ಯಾರಂಟಿ ಅನುಷ್ಠಾನ ಪ್ರಾಧಿಕಾರದ ಜಿಲ್ಲಾಧ್ಯಕ್ಷ ಚಂದ್ರಿಕಾ ಪರಮೇಶ್ವರ, ಭೀಮರಾಯನಗುಡಿ ಕಾಡಾ ಅಧ್ಯಕ್ಷ ಬಾಬು ಹೊನ್ನನಾಯಕ್ ಇದ್ದರು.

ಕಳಪೆ ಹತ್ತಿ ಬೀಜ ಮಾರಾಟ ನಿಷೇಧಕ್ಕೆ ಆಗ್ರಹಿಸಿ ಎತ್ತಿನ ಬಂಡಿ ಪ್ರತಿಭಟನೆ

ಜೇವರ್ಗಿ,ಮೇ.10-

ಕಳಪೆ ಮಟ್ಟದ ಹತ್ತಿ ಬೀಜಗಳ ಮಾರಾಟವನ್ನು ತಕ್ಷಣ ನಿಷೇಧಿಸಬೇಕು ಹಾಗೂ ಎಫ್‌ಐಡಿ ವ್ಯವಸ್ಥೆಯನ್ನು ರದ್ದುಪಡಿಸಬೇಕು ಎಂದು ಆಗ್ರಹಿಸಿ ಕರ್ನಾಟಕ ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆ ತಾಲೂಕು ಸಮಿತಿಯ ವತಿಯಿಂದ ಪಟ್ಟಣದಲ್ಲಿ ಎತ್ತಿನ ಬಂಡಿ ಮುಖಾಂತರ ಪ್ರತಿಭಟನೆ ನಡೆಸಲಾಯಿತು.



ಪ್ರತಿಭಟನೆಯಲ್ಲಿ ಸಂಘದ ರಾಜ್ಯ ಕಾರ್ಯದರ್ಶಿ ಮಹೇಶ್ ಸುಬೇದಾರ ಹಾಗೂ ರಾಜ್ಯ ಸಹ ಕಾರ್ಯದರ್ಶಿ ಅಲ್ಲಾ ಪಟೇಲ್ ಇಜೇರಿ ಮಾತನಾಡಿ, ಯಾವುದೇ ಕಾರಣಕ್ಕೂ ರೈತರಿಗೆ ಕಳಪೆ ಬೀಜ ವಿತರಣೆ ಆಗಬಾರದು. ಒಂದು ವೇಳೆ ಕಳಪೆ ಬೀಜ ವಿತರಣೆ ಮಾಡಿದರೆ ಸಂಬಂಧಪಟ್ಟ ಕಂಪನಿಗಳು ಹಾಗೂ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು. ತಾಲೂಕು ಅಧ್ಯಕ್ಷ ಮಲ್ಲನಗೌಡ ಪಾಟೀಲ ಗೌನಳ್ಳಿ ಮಾತನಾಡಿ, ಎಫ್‌ಐಡಿ ವ್ಯವಸ್ಥೆಯ ಮೂಲಕ ರಸಗೊಬ್ಬರ ವಿತರಣೆ ಮಾಡುವ ಕ್ರಮ ರೈತರಿಗೆ ತೊಂದರೆಯಾಗುತ್ತಿದೆ. ಹೀಗಾಗಿ ಹಿಂದಿನಂತೆ ಸರಳ ಹಾಗೂ ಸುಗಮವಾಗಿ ರಸಗೊಬ್ಬರ ವಿತರಣೆ ಮಾಡುವ ವ್ಯವಸ್ಥೆ ಜಾರಿಗೊಳಿಸಬೇಕು ಎಂದು ಆಗ್ರಹಿಸಿದರು. ಪ್ರತಿಭಟನೆಯ ಬಳಿಕ ತಹಶೀಲ್ದಾರ್ ಮಲ್ಲಣ್ಣ ಯಲಗೋಡ ಅವರ ಮೂಲಕ ಕಂದಾಯ ಸಚಿವರಿಗೆ ಮನವಿ ಪತ್ರ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ತಾಲೂಕು ಸಮಿತಿಯ ರೈತ ಮುಖಂಡರಾದ ಸಂಗೀತ ಕಲ್ಲೂರ, ಶೇಖಮ್ಮ ನೆಲೋಗಿ, ಪ್ರಭಾವತಿ ನೆಲೋಗಿ, ಬಸಮ್ಮ ಜೇವರ್ಗಿ, ಶಾರದಾ ಜೇವರ್ಗಿ, ಶಾಂತಮ್ಮ ಜೇವರ್ಗಿ, ಭೀಮು ಖಾದ್ಯಪುರ, ಜಯ ಕರ್ನಾಟಕ ತಾಲೂಕು ಅಧ್ಯಕ್ಷ ಭೀಮಶಂಕರ್ ಜನಿವಾರ, ಭಾಗಪ್ಪ ಗೌನಳ್ಳಿ, ನಮ್ಮ ಕರ್ನಾಟಕ ಸೇನೆ ತಾಲೂಕು ಅಧ್ಯಕ್ಷ ರವಿ ಪಾಟೀಲ್ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಒಂದನೇಯ ಪುಟದಿಂದ

ತಮಿಳುನಾಡಿನಲ್ಲಿ ವಿಜಯ್ ಸರ್ಕಾರ :ಸಿಎಂಯಾಗಿ ವಿಜಯ್ ಪ್ರಮಾಣ ವಚನ ಸ್ವೀಕಾರ

ಹೊಸ ಸಚಿವರು ಇವರು: ಎನ್. ಆನಂದ್, ಆಧವ್ ಅರ್ಜುನ, ಕೆ.ಎ.ಸೆಂಗೋಟ್ಟಯ್ಯನ್, ಕೆ.ಜಿ. ಅರುಣ್ ರಾಜ್, ಪಿ.ವೆಂಕಟರ ಮಣನ್, ಆರ್.ನಿರ್ಮಲಕುಮಾರ ರಾಜ್‌ಮೋಹನ್, ಟಿ.ಕೆ.ಪ್ರಭು ಮತ್ತು ಎಸ್.ಕೀರ್ತನಾ ಸೇರಿದಂತೆ 9 ಟಿವಿಕೆ ಶಾಸಕರು ವಿಜಯ್ ಅವರ ಚೊಚ್ಚಲ ಸರ್ಕಾರದ ಸಂಪುಟದಲ್ಲಿ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದ್ದಾರೆ. ತಮಿಳುನಾಡಿನಲ್ಲಿ ವಿಜಯ್‌ಗೆ ಸಿಕ್ಕ ಅಭೂತಪೂರ್ವ ಜನಾದೇಶ ಇತಿಹಾಸದ ಪುಟ ಸೇರಿದೆ. ಟಿವಿಕೆ ತನ್ನ ಚೊಚ್ಚಲ ರಾಜಕೀಯ ಅವಧಿ ಯಲ್ಲೇ ವಿಧಾನಸಭೆಯ ಒಟ್ಟು 234 ಸ್ಥಾನಗಳ ಪೈಕಿ 108 ಸ್ಥಾನಗಳನ್ನು ಜಯಿಸಿದೆ. ಇದರೊಂದಿಗೆ ರಾಜ್ಯ ರಾಜಕೀಯದ ಇತಿಹಾಸದಲ್ಲೇ ಮೊದಲ ಬಾರಿಗೆ ಎರಡೂ ಪರಂ ಪರೆಯ 'ದ್ರಾವಿಡ' ಪಕ್ಷಗಳನ್ನು ಅಧಿಕಾರದಿಂದ ಹೊರಹಾಕುವಲ್ಲಿ ಯಶಸ್ವಿಯಾಗಿದೆ.

ಆದಾಗ್ಯೂ, ವಿಜಯ್ ಸರ್ಕಾರ ರಚನೆಗೆ ಬೇಕಾಗುವಷ್ಟು ಬಹುಮತ ಸಿಗಲಿಲ್ಲ. ನಂತರ ಡಿಎಂಕೆ ನೇತೃತ್ವದ ಜಾತ್ಯತೀತ ಪ್ರಗತಿಪರ ಒಕ್ಕೂಟದ ಮಿತ್ರಪಕ್ಷಗಳಾಗಿದ್ದ ಕಾಂಗ್ರೆಸ್ (5), ಸಿಪಿಐ-ಎಂ (2), ಸಿಪಿಐ (2), ವಿಸಿಕೆ (2) ಮತ್ತು ಐಯುಎಂಎಲ್ (2) ವಿಜಯ್ ಸರ್ಕಾರಕ್ಕೆ ಬೆಂಬಲ ನೀಡಿದವು. ಈ ಮೂಲಕ ಮ್ಯಾಜಿಕ್ ನಂಬರ್ 118 ಸಂಖ್ಯೆಯನ್ನು ಅವರು ದಾಟಿದ್ದು, ಇದೀಗ ಸರ್ಕಾರಕ್ಕೆ 120 ಶಾಸಕರ ಬೆಂಬಲ ದೊರೆತಿದೆ.

'ತಲಪತಿ' ಎಂದೇ ಕರೆಯಲ್ಪ ಡುವ ವಿಜಯ್, ಚುನಾವಣಾ ರ‍್ಯಾಲಿಗಳಲ್ಲಿ ಜನಸಮೂಹವನ್ನು ಸೆಳೆಯುವ ಸಾಮರ್ಥ್ಯ ತೋರಿಸಿ ದ್ದರು. ಇವರನ್ನು ಅನೇಕರು ನಟ- ರಾಜಕಾರಣಿ ಮತ್ತು ಮಾಜಿ ಮುಖ್ಯಮಂತ್ರಿ ಎಂ.ಜಿ.ರಾಮ ಚಂದ್ರನ್ ಅವರಿಗೆ ಹೋಲಿಸಿದ್ದಾರೆ.

ತಮಿಳುನಾಡು ನಟರು ರಾಜಕೀಯ ಪ್ರವೇಶಿಸುವ ಮತ್ತು ಗೆಲ್ಲುವ ದೀರ್ಘ ಇತಿಹಾಸ ಹೊಂದಿ ದ್ದರೂ, ಕ್ಯಾಪ್ಟನ್ ವಿಜಯಕಾಂತ್ ನಂತರದ ಸಾಲಿನಲ್ಲಿ ನಿಲ್ಲಲು ರಾಜ್ಯ ಮತ್ತೊಬ್ಬ ತಾರೆಗಾಗಿ ಕಾಯುತ್ತಿತ್ತು.

2009ರಿಂದ ವಿಜಯ್ ರಾಜಕೀಯ ಪ್ರವೇಶಿಸುವ ಊಹಾಪೋಹಗಳಿದ್ದವು. ಈ ನಿಟ್ಟಿನಲ್ಲಿ ಕಾರ್ಯಚಟುವಿಕೆಗಳನ್ನು ಪ್ರಾರಂಭಿಸಿದ್ದ ವಿಜಯ್, ಸಾಮಾಜಿಕ ಕೆಲಸಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದರು. ಹಾಲಿ ಚುನಾವಣೆಯಲ್ಲಿ ವಿಜಯ್, ಪೆರಂಬೂರ್ ಮತ್ತು ತಿರುಚ್ಚಿ ಪೂರ್ವ ಎರಡೂ ಕ್ಷೇತ್ರಗಳಲ್ಲಿ ಜಸ ಸಾಧಿಸಿದ್ದರು.

ಸಿಎಂ ವಿಜಯ್‌ಗೆ ಪ್ರಧಾನಿ ಮೋದಿ ಅಭಿನಂದನೆ: ತಮಿಳುನಾಡಿನ ಹೊಸ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ಟಿವಿಕೆ ಮುಖ್ಯಸ್ಥ ಸಿ.ಜೋಸೆಫ್ ವಿಜಯ್ ಅವರನ್ನು ಪ್ರಧಾನಿ ನರೇಂದ್ರ ಮೋದಿ ಅಭಿನಂದಿಸಿದ್ದಾರೆ. ಜನರ ಜೀವನವನ್ನು ಸುಧಾರಿಸಲು ಕೇಂದ್ರ ಸರ್ಕಾರ ರಾಜ್ಯ ಸರ್ಕಾರದೊಂದಿಗೆ ಕೆಲಸ ಮಾಡುವುದನ್ನು ಮುಂದುವರಿಸುತ್ತದೆ ಎಂದು ತಿಳಿಸಿದ್ದಾರೆ.

ಗೃಹಿಣಿಯರು ಮಲ್ಲಮ್ಮರ ಆದರ್ಶಗಳನ್ನು ಅಳವಡಿಸಿಕೊಳ್ಳಿ -ಬೋಸರಾಜು

ಹೇಮರೆಡ್ಡಿ ಮಲ್ಲಮ್ಮ ನಾಮಫಲಕಕ್ಕೆ ಮಾಲಾರ್ಪಣೆ ಮಾಡಿ ನಂತರ ಮಾತನಾಡಿದ ಅವರು ಮಲ್ಲಮ್ಮ ಅವರ ಸುತ್ತ ಸಾಕಷ್ಟು ಪವಾಡಗಳಿದ್ದರೂ ಅವರು ನಡೆದುಕೊಂಡ ಜೀವನ ಸಾಮಾನ್ಯವೇ ಆಗಿದೆ. ಸಮಾಜದ ಏಳ್ಗೆಗೆ ನಿರಂತರ ಶ್ರಮಿಸಿದ್ದ ಇವರ ವಿಚಾರಗಳು ಭವಿಷ್ಯದ ಪೀಳಿಗೆಗೆ ಸಿಗುವ ಅಗತ್ಯವಿದೆ ಎಂದರು.

ಶಾಸಕರಾದ ಜಿ.ಹಂಪಯ್ಯನಾಯಕ ಮಾತನಾಡಿ ಕಾಯಕದ ಮೂಲಕವೇ ತನ್ನ ಆರಾಧ್ಯ ದೈವ ಮಲ್ಲಿಕಾರ್ಜುನನನ್ನು ಕಾಣಲು ಸಾಧ್ಯವಾಗಿಸಿದವಳು ಹೇಮರೆಡ್ಡಿ ಮಲ್ಲಮ್ಮ, ತಾವು ಸಾರಿದ ಮೌಲ್ಯ ಮತ್ತು ತತ್ವಗಳಿಗೆ ಬದ್ಧವಾಗಿ ನಡೆದುಕೊಂಡ ಹೇಮರೆಡ್ಡಿ ಮಲ್ಲಮ್ಮನವರು ಪ್ರಸಕ್ತ ಸಮಾಜದ ಎಲ್ಲ ಮಹಿಳೆಯರಿಗೂ ಆದರ್ಶಪ್ರಾಯರು. ಸಂಸಾರದ ಎಲ್ಲ ನೋವು-ನಲಿವುಗಳನ್ನು ಅನುಭವಿಸಿದ ಇವರು ಭಿನ್ನವಾಗಿ ನಿಲ್ಲಲು ಇವರೊಳಗಿನ ಆಧ್ಯಾತ್ಮಿಕ ಶಕ್ತಿಯೇ ಕಾರಣ ಎಂದು ತಿಳಿಸಿದರು. ವಿದ್ಯಾರ್ಥಿಗಳಿಗೆ ಪ್ರತಿಭಾಪುರಸ್ಕಾರ ನೀಡಲಾಯಿತು. ಬಸವಲಿಂಗ ಬಾದರ್ಲಿ ಉಪನ್ಯಾಸ ನೀಡಿದರು.

ಈ ಸಂದರ್ಭದಲ್ಲಿ ಸಂಸದರಾದ ಜಿ.ಕುಮಾರ ನಾಯಕ, ಜೆ.ಶರಣಪ್ಪಗೌಡ, ಶಿವಮೂರ್ತಿ ರುದ್ರಪ್ಪ ಅಂಗಡಿ, ಅಮರೇಗೌಡ ಹಂಚಿನಾಳ,ಟಿ.ಆರ್ ಪಾಟೀಲ್, ಪ.ಪಂಚಾಯತಿ ಅದ್ಯಕ್ಷ ಹಾಜಿ ಚೌದ್ರಿ, ಚಂದ್ರಶೇಖರ ಸ್ವಾಮಿ ಮೌಲಾಸಾ ವರ್ಚಸ್, ಶಾಂತಪ್ಪ ಗೌಡ ನಂದರೆಡ್ಡಿ,ಅಯ್ಯನಗೌಡ ಐರೆಡ್ಡಿ, ಶಿವರಾಮ ರೇಡ್ಡಿ,ಪ್ರಕಾಶ ಪಾಟೀಲ್, ವಿಜಯಕುಮಾರ್ ಗೌಡ, ವೆಂಕಟ ರೆಡ್ಡಿ, ಬಲ್ಕಲ್, ಪರ್ವತರೇಡ್ಡಿ, ಉದಯಕುಮಾರ ಚಾಗಭಾವಿ,ಅಮರೇಶನಂದರೇಡ್ಡಿ,ಅಮರೇಶ ಚಾಗಭಾವಿ,ಮಲ್ಲಪ್ಪ, ಗ್ಯಾನಪ್ಪ, ಶಿವರಾಜ ಬೆಳವಿನೂರು,

ಜಾನುವಾರುಗಳ ಸಾಗಣೆಗೆ ತಡೆ ಒಡ್ಡುವವರ ವಿರುದ್ಧ ಕ್ರಮಕ್ಕೆ ಒತ್ತಾಯ

ನಡೆಯುತ್ತಿದೆ. ಆದರೆ, ಕೆಲ ದುಷ್ಕರ್ಮಿಗಳು ವಾಹನಗಳನ್ನು ತಡೆದು ಚಾಲಕರ ಮೇಲೆ ಹಲ್ಲೆ ನಡೆಸಿ ಗುಂಡಾ ವರ್ತನೆ ತೋರುತ್ತಿದ್ದಾರೆ. ಕಾನೂನನ್ನು ಕೈಗೆತ್ತಿಕೊಂಡು ಹಲ್ಲೆ ಮಾಡುವವರ ಮೇಲೆ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಮನವಿಯಲ್ಲಿ ತಿಳಿಸಿದ್ದಾರೆ.

ಈ ಸಂದರ್ಭದಲ್ಲಿ ರಾಜ್ಯ ರೈತ ಸಂಘದ ಗೌರವಾಧ್ಯಕ್ಷ ಚಾಮರಸ ಮಾಲಿ ಪಾಟೀಲ, ಎಂಆರ್ ಎಚ್ ಎಸ್ ರಾಜ್ಯಾಧ್ಯಕ್ಷ ಜೆಬಿ ರಾಜು, ವಿವಿಧ ಸಂಘಟನೆಗಳ ಮುಖಂಡರಾದ ಖಾಜಾ ಅಸ್ಲಂ ಅಹಮದ್, ಜಾನ್ ವೆಸ್ಲಿ ಕಾತರಕಿ, ರವೀಂದ್ರನಾಥ್ ಪಟ್ಟಿ, ಎಂ ಆರ್ ಬೇರಿ, ಆಂಜನೇಯ ಕುರುಬದೊಡ್ಡಿ, ಪೈಸಲ್ ಖಾನ್, ಸೋಹೈಲ್ ನಾಯಕ್, ನರಸಿಂಹಲು, ಬಿ.ಬಸವರಾಜ, ಮಹಮ್ಮದ್ ಸಾಜೀದ್ ಮತ್ತಿತರರು ಹಾಜರಿದ್ದರು.

ಕಂದಾಯ ಸೇವೆಯಲ್ಲಿ ಕರ್ನಾಟಕ ದೇಶದಲ್ಲೇ ನಂಬರ್ 1 : ಸಚಿವ ಪ್ರಿಯಾಂಕ್ ಖರ್ಗೆ

ಕಲಬುರಗಿ ,ಮೇ.10-

ಕಂದಾಯ ಸೇವೆಗಳನ್ನು ಪಡೆಯಲು ಜನರು ಕಚೇರಿಗಳಿಗೆ ಅಲೆದಾಡುವುದನ್ನು ತಪ್ಪಿಸುವ ಉದ್ದೇಶದಿಂದ ಸರ್ಕಾರ ಅನೇಕ ಸೇವೆಗಳನ್ನು ಡಿಜಿಟಲ್ ಮಾದರಿಯಲ್ಲಿ ಮನೆಬಾಗಿಲಿಗೆ ತಲುಪಿಸಿದೆ. ಕಂದಾಯ ಹಾಗೂ ಪಂಚಾಯತ್ ರಾಜ್ ಸೇವೆ ನೀಡುವಲ್ಲಿ ಕರ್ನಾಟಕ ದೇಶದಲ್ಲೇ ನಂಬ-ರ1 ಸ್ಥಾನದಲ್ಲಿದೆ ಎಂದು ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.



ನಗರದ ಡಾ. ಎಸ್.ಎಂ. ಪಂಡಿತ್ ರಂಗಮಂದಿರದಲ್ಲಿ ಶನಿವಾರ ನಡೆದ ಕಂದಾಯ ಇಲಾಖೆಯ ಹಕ್ಕುಪತ್ರ, ಪಹಣಿ, ಪಿಂಚಣಿ ಸೇರಿದಂತೆ ವಿವಿಧ ಸೌಲಭ್ಯ ವಿತರಣಾ ಅಭಿಯಾನಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

''ನಮ್ಮ ಸರ್ಕಾರ ಈಗಾಗಲೇ ಐದು ಗ್ಯಾರಂಟಿ ಯೋಜನೆಗಳನ್ನು ಜನರಿಗೆ ತಲುಪಿಸಿದೆ. ಜನಸಾಮಾನ್ಯರಿಗೆ ಅವರ ಆಸ್ತಿಯ ಕಾನೂನಾತ್ಮಕ ಹಕ್ಕು ದಾಖಲೆಗಳನ್ನು ಒದಗಿಸುವ ಭೂ ಗ್ಯಾರಂಟಿ ನಮ್ಮ ಸರ್ಕಾರದ ಆರನೇ ಗ್ಯಾರಂಟಿಯಂತಿದೆ'' ಎಂದು ಹೇಳಿದರು.

ಇಂದು ವಿತರಿಸಲಾದ ಹಕ್ಕುಪತ್ರಗಳು, ದರಖಾಸ್ತು ಪೋಡಿ ಮತ್ತು ಇ-ಫೌತಿ ದಾಖಲೆಗಳು ಕೇವಲ ಕಾಗದಗಳಲ್ಲ; ಬಡವರ ಸ್ವಾಭಿಮಾನ ಮತ್ತು ಆರ್ಥಿಕ ಭದ್ರತೆಯ ಅಡಿಪಾಯವಾಗಿವೆ. ಭೂ ಹಕ್ಕು ಸಿಕ್ಕಾಗ ಮಾತ್ರ ವ್ಯಕ್ತಿಗೆ ಗೌರವಯುತ ಬದುಕು ಸಾಧ್ಯ. ಈ ದಾಖಲೆಗಳ ಮೂಲಕ ರೈತರು ಬ್ಯಾಂಕ್ ಸಾಲ, ಬೆಳೆ ವಿಮೆ ಹಾಗೂ ಸರ್ಕಾರಿ ಸಬ್ಸಿಡಿ ಪಡೆಯಲು ಅನುಕೂಲವಾಗಲಿದೆ ಎಂದು ತಿಳಿಸಿದರು.

ಕಳೆದ ಮೂರು ವರ್ಷಗಳಲ್ಲಿ ಜಿಲ್ಲೆಯ 1,14,337 ಫಲಾನುಭವಿಗಳಿಗೆ ಏಕಕಾಲದಲ್ಲಿ ಸೌಲಭ್ಯ ವಿತರಿಸಿರುವುದು ಕಂದಾಯ ಇಲಾಖೆಯ ದೊಡ್ಡ ಸಾಧನೆ ಎಂದು ಸಚಿವರು ಶ್ಲಾಘಿಸಿದರು. ಬಿ. ಫೌಝಿಯಾ ತರನ್ನಮ್ ನೇತೃತ್ವದ ತಂಡದ ಕಾರ್ಯವನ್ನು ಅವರು ಮೆಚ್ಚಿದರು.

40 ವರ್ಷಗಳಿಂದ ಬಾಕಿ ಉಳಿದಿದ್ದ ದರಖಾಸ್ತು ಪೋಡಿ ಪ್ರಕರಣಗಳಿಗೆ ಪರಿಹಾರ ನೀಡಲಾಗಿದೆ. 94ಸಿ ಹಾಗೂ 94 ಸಿಸಿ ಅಡಿಯಲ್ಲಿ ಮನೆ ಹಕ್ಕುಪತ್ರ ವಿತರಿಸಲಾಗಿದೆ. ಆಸ್ತಿ ಕಬಳಿಕೆ ತಡೆಯಲು ಪಹಣಿಗೆ ಆಧಾರ್ ಜೋಡಣೆ ಮಾಡಲಾಗಿದೆ ಎಂದರು.

ಕಳೆದ ಮೂರು ವರ್ಷಗಳಲ್ಲಿ ಅತಿವೃಷ್ಟಿ ಪರಿಹಾರವಾಗಿ ಜಿಲ್ಲೆಗೆ 2,590 ಕೋಟಿ ರೂ. ನೀಡಲಾಗಿದೆ. ಬೆಳೆ ವಿಮೆ ಪರಿಹಾರ ವಿತರಣೆಯಲ್ಲಿ ಕಲಬುರಗಿ ಜಿಲ್ಲೆ ರಾಷ್ಟ್ರದಲ್ಲೇ ಎರಡನೇ ಸ್ಥಾನದಲ್ಲಿದೆ ಎಂದು ಸಚಿವರು ಮಾಹಿತಿ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶಾಸಕ ಅಲ್ಲಮಪ್ರಭು ಪಾಟೀಲ್ ಮಾತನಾಡಿ, ಜಿಲ್ಲೆಯಲ್ಲಿ ಮೂರು ವರ್ಷಗಳಲ್ಲಿ ದಾಖಲೆ ಪ್ರಮಾಣದಲ್ಲಿ 6,060 ಹಕ್ಕುಪತ್ರ ವಿತರಿಸಲಾಗಿದೆ. ಇದು ರಾಜ್ಯದ ಇತಿಹಾಸದಲ್ಲೇ ದೊಡ್ಡ ಸಾಧನೆಯಾಗಿದೆ ಎಂದು ಹೇಳಿದರು.

ಜಿಲ್ಲಾಧಿಕಾರಿ ಬಿ. ಫೌಝಿಯಾ ತರನ್ನುಮ್ ಪ್ರಸ್ತಾವಿಕವಾಗಿ ಮಾತನಾಡಿ, ಕಳೆದ ಮೂರು ವರ್ಷಗಳಲ್ಲಿ 330 ಕಂದಾಯ ಗ್ರಾಮಗಳನ್ನು ಘೋಷಿಸಲಾಗಿದೆ. 23,447 ಪಹಣಿ ತಿದ್ದುಪಡಿ, 33,940 ಇ-ಫೌತಿ ಅರ್ಜಿಗಳ ವಿಲೇವಾರಿ ಹಾಗೂ 453 ಗ್ರಾಮಗಳಲ್ಲಿ ಪೋಡಿ ಮುಕ್ತ ಅಳತೆ ಕಾರ್ಯ ಪೂರ್ಣಗೊಂಡಿದೆ ಎಂದು ಮಾಹಿತಿ ನೀಡಿದರು.

ಭೂ-ಸುರಕ್ಷಾ ಯೋಜನೆಯಡಿ ಜಿಲ್ಲೆಯ 11 ತಾಲೂಕುಗಳಲ್ಲಿ 1.41 ಕೋಟಿ ಪುಟಗಳ ದಾಖಲೆಗಳನ್ನು ಡಿಜಿಟಲೀಕರಣ ಮಾಡಲಾಗಿದೆ. ಪಹಣಿಗೆ ಆಧಾರ್ ಸೀಡಿಂಗ್ ಶೇ.85ರಷ್ಟು ಪೂರ್ಣಗೊಂಡಿದೆ. ಸಾಮಾಜಿಕ ಭದ್ರತಾ ಯೋಜನೆಗಳಡಿ 3.13 ಲಕ್ಷಕ್ಕೂ ಅಧಿಕ ಫಲಾನುಭವಿಗಳಿಗೆ ಡಿಬಿಟಿ ಮೂಲಕ ನೇರ ಪಿಂಚಣಿ ನೀಡಲಾಗುತ್ತಿದೆ ಎಂದು ತಿಳಿಸಿದರು.

ತಹಶೀಲ್ದಾರರಿಗೆ ಪ್ರಶಂಸಾ ಪತ್ರ ವಿತರಣೆ : ಕಳೆದ ಮೂರು ವರ್ಷದ ಅವಧಿಯಲ್ಲಿ ಕಂದಾಯ ಗ್ರಾಮ ಘೋಷಣೆಯಲ್ಲಿ ಗಮನಾರ್ಹ ಸಾಧನೆ ಮಾಡಿದ ಅಫಜಲಪುರ ತಹಶೀಲ್ದಾರ್ ಸಂಜೀವಕುಮಾರ ದಾಸ್ರ್, ಕಲಬುರಗಿ ತಹಶೀಲ್ದಾರ್ ಕೆ. ಆನಂದಶೀಲ, ಭೂ ಸುರಕ್ಷಾ ಯೋಜನೆಯಡಿ ಉತ್ತಮ ಕಾರ್ಯನಿರ್ವಹಿಸಿದ ಚಿಂಚೋಳಿ ತಹಶೀಲ್ದಾರ ಸುಬ್ಬಣ್ಣ ಜಮಖಂಡಿ ಮತ್ತು ಶಹಾಬಾದ ತಹಶೀಲ್ದಾರ ನೀಲಪ್ರಭಾ, ಲ್ಯಾಂಡ್ ಬೀಟ್ ಮೂಲಕ ಸರ್ಕಾರಿ ಜಮೀನು ಸಮರಕ್ಷಣೆಯಲಿ ಮಹತ್ತರ ಪಾತ್ರ ವಹಿಸಿರುವ ಚಿತ್ತಾಪುರ ತಹಶೀಲ್ದಾರ ನಾಗಯ್ಯ ಹಿರೇಮಠ, ಜೇವರ್ಗಿ ತಹಶೀಲ್ದಾರ ಮಲ್ಲಣ್ಣ, ಆಳಂದ ತಹಶೀಲ್ದಾರ ಅಣ್ಣಾರಾವ ಪಾಟೀಲ, ಇ-ಪೌತಿಯಲ್ಲಿ ಗಮನಾರ್ಹ ಪ್ರಗತಿ ಸಾಧಿಸಿದ ಕಮಲಾಪುರ ತಹಶೀಲ್ದಾರ ಮೊಹಮ್ಮದ್ ಮೋಹಸೀನ್, ಸೇಡಂ ತಹಶೀಲ್ದಾರ ಶ್ರೇಯಾಂಕಾ ಧನಶ್ರೀ, ಪಹಣಿ ಜೋಡಣೆಯಲ್ಲಿ ಉತ್ತಮ ಪ್ರಗತಿ ದಾಖಲಿಸಿದ ಯಡ್ರಾಮಿ ತಹಶೀಲ್ದಾರ ಯಲ್ಲಪ್ಪ ಸುಬೇದಾರ, ಕಾಳಗಿ ತಹಶೀಲ್ದಾರ ಪೃಥ್ವಿರಾಜ ಪಾಟೀಲ ಅವರನ್ನು ಸಚಿವ ಪ್ರಿಯಾಂಕ ಖರ್ಗೆ ಅವರು ಪ್ರಶಂಸನಾ ಪತ್ರ ನೀಡಿ ಗೌರವಿಸಿದರು.

ಕಾರ್ಯಕ್ರಮದಲ್ಲಿ ವಿಧಾನ ಪರಿಷತ್ ಶಾಸಕ ಜಗದೇವ ಗುತ್ತೇದಾರ, ತಿಪ್ಪಣ್ಣಪ್ಪ ಕಮಕನೂರ, ಜೆಸ್ಕಾಂ ಅಧ್ಯಕ್ಷ ಪ್ರವೀಣ ಪಾಟೀಲ ಹರವಾಳ, ಕಲಬುರಗಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಮಜಹರ್ ಆಲಂ ಖಾನ್, ಕಲಬುರಗಿ ಕಾಡಾ ಅಧ್ಯಕ್ಷ ಡಾ.ಎಂ.ಎ.ರಶೀದ್, ಗ್ಯಾರಂಟಿ ಅನುಷ್ಠಾನ ಪ್ರಾಧಿಕಾರದ ಜಿಲ್ಲಾಧ್ಯಕ್ಷ ಚಂದ್ರಿಕಾ ಪರಮೇಶ್ವರ, ಮಹಾನಗರ ಪಾಲಿಕೆಯ ಮಹಾಪೌರರಾದ ವರ್ಷಾ ರಾಜೀವ ಜಾನೆ, ಪ್ರಾದೇಶಿಕ ಆಯುಕ್ತೆ ಜಹೀರಾ ನಸೀಮ್, ಕಲಬುರಗಿ ನಗರ ಪೊಲೀಸ್ ಆಯುಕ್ತ ಡಾ. ಶರಣಪ್ಪ ಎಸ್.ಡಿ, ಜಿಲ್ಲಾ ಪಂಚಾಯತ್ ಸಿ.ಇ.ಓ ಭಂವರ್ ಸಿಂಗ್ ಮೀನಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅಡ್ಡೂರು ಶ್ರೀನಿವಾಸಲು, ಡಿ.ಸಿ.ಪಿ. ಶಾಲು, ಮಹಾನಗರ ಪಾಲಿಕೆ ಆಯುಕ್ತ ಅವಿನಾಶ ಶಿಂಧೆ, ಸಹಾಯಕ ಆಯುಕ್ತರಾದ ಸಾಹಿತ್ಯ ಆಲದಕಟ್ಟಿ, ಪ್ರಭುರೆಡ್ಡಿ ಸೇರಿದಂತೆ ನೂರಾರು ಸಂಖ್ಯೆಯಲಿ ಕಂದಾಯ ಇಲಾಖೆಯ ಅಧಿಕಾರಿ-ಸಿಬ್ಬಂದಿಗಳು ಕಂದಾಯ ಪರ್ವದಲ್ಲಿ ಭಾಗಿಯಾಗಿದ್ದರು. ಅಪರ ಜಿಲ್ಲಾಧಿಕಾರಿ ರಾಯಪ್ಪ ಹುಣಸಗಿ ಸ್ವಾಗತಿಸಿದರು.

ಅಂಬೇಡ್ಕರ್ ರಿಂದ ಮಹಿಳೆಯರಿಗೆ ಸಮಾನತೆ ಸಿಕ್ಕಿದೆ : ಸಚಿವ ಪ್ರಿಯಾಂಕ್ ಖರ್ಗೆ

ಕಲಬುರಗಿ ,ಮೇ.10-

ಚತುರ್ವರ್ಣ ಪದ್ಧತಿ ಹಾಗೂ ಮನಸ್ಮೃತಿ ಸಿದ್ಧಾಂತಗಳಿಂದ ಮಹಿಳೆಯರು ಆರ್ಥಿಕ ಮತ್ತು ಸಾಮಾಜಿಕ ಸಮಾನತೆಯಿಂದ ವಂಚಿತರಾಗಿದ್ದರು. ಅಂತಹ ಮಹಿಳೆಯರಿಗೆ ಸ್ವಾಭಿಮಾನದ ಬದುಕು ಕಲ್ಪಿಸಿದವರು ಸಾಮಾಜಿಕ ಕ್ರಾಂತಿಯ ಹರಿಕಾರ ಬಸವಣ್ಣ, ಸಂವಿಧಾನ ಶಿಲ್ಪಿ ಅಂಬೇಡ್ಕರರು ಎಂದು ರಾಜ್ಯದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ಐ.ಟಿ-ಬಿ.ಟಿ ಹಾಗೂ ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.



ಕಲಬುರಗಿ ನಗರದ ಡಾ. ಎಸ್.ಎಂ. ಪಂಡಿತ್ ರಂಗಮಂದಿರದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಿಂದ ಆಯೋಜಿಸಿದ್ದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಇದೇ ವೇಳೆ ನೂತನವಾಗಿ ನೇಮಕಗೊಂಡ 1,036 ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರಿಗೆ ನೇಮಕಾತಿ ಪತ್ರ ವಿತರಿಸಲಾಯಿತು.

ಮಹಿಳೆಯರಿಗೆ ಸಮಾನ ಹಕ್ಕು ದೊರಕಿಸಿಕೊಡಲು ಬಸವಣ್ಣನವರು ಅನುಭವ ಮಂಟಪದಲ್ಲಿ ಮಹಿಳೆಯರಿಗೆ ಸಮಾನ ಅವಕಾಶ ನೀಡಿದ್ದರು. ಬಳಿಕ ಅಂಬೇಡ್ಕರ್ ಅವರು ಮಹಿಳೆಯರಿಗೆ ತಂದೆ ಆಸ್ತಿಯಲ್ಲಿ ಪಾಲು, ವಿಚ್ಛೇದನ ಹಕ್ಕು ಸೇರಿದಂತೆ ಹಲವು ಅಂಶಗಳನ್ನು ಒಳಗೊಂಡ ಹಿಂದು ಕೋಡ್ ಬಿಲ್ ಜಾರಿಗೆ ಪ್ರಯತ್ನಿಸಿದ್ದರು ಎಂದು ಖರ್ಗೆ ತಿಳಿಸಿದರು.

ರಾಜ್ಯ ಸರ್ಕಾರ ಮಹಿಳೆಯರ ಆರ್ಥಿಕ ಮತ್ತು ಸಾಮಾಜಿಕ ಸಬಲೀಕರಣಕ್ಕಾಗಿ ಪಂಚ ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತಂದಿದೆ. ಗೃಹಲಕ್ಷ್ಮಿ ಹಾಗೂ ಶಕ್ತಿ ಯೋಜನೆಗಳಿಂದ ಮಹಿಳೆಯರು ಆರ್ಥಿಕವಾಗಿ ಸಬಲರಾಗುತ್ತಿದ್ದಾರೆ ಎಂದು ಹೇಳಿದರು.

ಶೀಘ್ರದಲ್ಲೇ ಡೇ ಕೇರ್ ಸೆಂಟರ್ :

ವಿಶೇಷಚೇತನ ಮಕ್ಕಳ ಆರೈಕೆಗೆ ಕಲಬುರಗಿ ನಗರದಲ್ಲಿ ಶೀಘ್ರದಲ್ಲೇ ಡೇ ಕೇರ್ ಸೆಂಟರ್ ಆರಂಭಿಸಲಾಗುವುದು. ಜೊತೆಗೆ ಹಳೆಯದಾಗಿರುವ ರಾಜ್ಯ ಮಹಿಳಾ ವಸತಿ ನಿಲಯಕ್ಕೆ ಹೊಸ ಕಟ್ಟಡ ಮಂಜೂರು ಮಾಡಲಾಗುವುದು ಎಂದು ಭರವಸೆ ನೀಡಿದರು.

ಜಿಲ್ಲಾಧಿಕಾರಿಗೆ ವಿಶೇಷ ಸನ್ಮಾನ :

ಜಿಲ್ಲೆಯಲ್ಲಿ ಅಪೌಷ್ಟಿಕತೆ ನಿವಾರಣೆ, ಬಾಲ್ಯ ವಿವಾಹ ತಡೆ ಹಾಗೂ ಅಂಗನವಾಡಿ ಅಭಿವೃದ್ಧಿ ಸೇರಿದಂತೆ ಹಲವು ಜನಪರ ಕಾರ್ಯಗಳನ್ನು ಪರಿಣಾಮಕಾರಿಯಾಗಿ ಜಾರಿಗೆ ತಂದ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿ ಬಿ.ಫೌಝಿಯಾ ತರನ್ನಮ್ ಅವರಿಗೆ ವಿಶೇಷ ಸನ್ಮಾನ ಮಾಡಲಾಯಿತು.


ಅಂಗನವಾಡಿ ಕೇಂದ್ರಕ್ಕೆ ಉಚಿತ ಭೂಮಿ ನೀಡಿದ ನಿವೇಶನ ಮಾಲೀಕರಾದ ಮಾಲಾಶ್ರೀ ಶಿವಮೂರ್ತಿ ಮೇಲಕೇರಿ, ರೇವಣಸಿದ್ದಪ್ಪ ದುಕಾನದಾರ, ಅಫಜಲಪೂರ ತಾಲೂಕಿನ ಪ್ರತಿ ಅಂಗನವಾಡಿ ಕೇಂದ್ರಕ್ಕೆ ತಲಾ 30 ಮಕ್ಕಳಂತೆ 8 ಅಂಗನವಾಡಿ ಕೇಂದ್ರಗಳ 240 ಮಕ್ಕಳಿಗೆ ಸಮವಸ್ತ್ರ ನೀಡಿದ ಸ್ತ್ರೀ ಶಕ್ತಿ ಒಕ್ಕೂಟದ ಅಧ್ಯಕ್ಷೆ ಶ್ರೀದೇವಿ ಪಾಟೀಲ, ಗೃಹ ಲಕ್ಷ್ಮೀ ಯೋಜನೆಯಿಂದ ಬಂದ ಹಣ ಕೂಡಿಟ್ಟು ಅಂಗನವಾಡಿ ಮಕ್ಕಳಿಗೆ ಸಮವಸ್ತ್ರ, ಪೀಠೋಪಕರಣಗಳು, ಕಲಿಕಾ ಸಾಮಗ್ರಿ ನೀಡಿದ ಅಂಗನವಾಡಿ ಕಾರ್ಯಕರ್ತೆಯರಾದ ವಿದ್ಯಾನಿಧಿ, ಸಿದ್ದಮ್ಮ, ಮಲ್ಲಮ್ಮ, ನೇತ್ರಾವತಿ, ತಯ್ಯಬಾ ಅವರಿಗೂ ವಿಶೇಷವಾಗಿ ಸತ್ಕರಿಸಿ ಗೌರವಿಸಲಾಯಿತು.

ಕಲಬುರಗಿ ದಕ್ಷಿಣ ಶಾಸಕ ಅಲ್ಲಮಪ್ರಭು ಪಾಟೀಲ್ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ವಿಧಾನ ಪರಿಷತ್ ಶಾಸಕ ಜಗದೇವ ಗುತ್ತೇದಾರ, ಜೆಸ್ಕಾಂ ಅಧ್ಯಕ್ಷ ಪ್ರವೀಣ ಪಾಟೀಲ, ಕಲಬುರಗಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಮಜಹರ್ ಆಲಂ ಖಾನ್, ಗ್ಯಾರಂಟಿ ಅನುಷ್ಠಾನ ಪ್ರಾಧಿಕಾರದ ಜಿಲ್ಲಾಧ್ಯಕ್ಷ ಚಂದ್ರಿಕಾ ಪರಮೇಶ್ವರ, ಕರ್ನಾಟಕ ದ್ವಿದಳ ಧಾನ್ಯ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಸೈಯದ್ ಮಹೆಬೂಬ್ ಚಿಸ್ತಿ, ಭೀಮರಾಯನಗುಡಿ ಕಾಡಾ ಅಧ್ಯಕ್ಷ ಬಾಬು ಹೊನ್ನನಾಯಕ್, ಮೇಯರ್ ವರ್ಷಾ ರಾಜೀವ ಜಾನೆ, ಉಪ ಮೇಯರ್ ತೃಪ್ತಿ ಲಾಖೆ, ಜಿಲ್ಲಾಧಿಕಾರಿ ಬಿ.ಫೌಜಿಯಾ ತರನ್ನುಮ್, ನಗರ ಪೊಲೀಸ್ ಆಯುಕ್ತ ಡಾ.ಎಸ್.ಡಿ.ಶರಣಪ್ಪ, ಎಸ್.ಪಿ. ಅಡ್ಡೂರು ಶ್ರೀನಿವಾಸುಲು, ಜಿಲ್ಲಾ ಪಂಚಾಯತ್ ಸಿ.ಇ.ಓ ಭಂವರ್ ಸಿಂಗ್ ಮೀನಾ, ಡಿಸಿಪಿ ಶಾಲೂ, ಮಹಾನಗರ ಪಾಲಿಕೆ ಆಯುಕ್ತ ಅವಿನಾಶ ಶಿಂಧೆ, ಸಹಾಯಕ ಅಯುಕ್ತೆ ಸಾಹಿತ್ಯ ಆಲದಕಟ್ಟಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ರಾಜಕುಮಾರ ರಾಠೋಡ ಸೇರಿದಂತೆ ತಾಲೂಕಾ ಸಿ.ಡಿ.ಪಿ.ಓ. ಗಳು, ಅಧಿಕಾರಿ-ಸಿಬ್ಬಂದಿಗಳು, ಅಂಗನವಾಡಿ ಕಾಯಕರ್ತೆಯರು ಇದ್ದರು.

ರೆಡ್ಡಿ ಸಮಾಜದ ಬಂಗಾರದ ಕಡ್ಡಿ ಹೇಮರೆಡ್ಡಿ ಮಲ್ಲಮ್ಮ- ಬಿರಾದಾರ್

ರಾಯಚೂರು,ಮೇ.10-

ಭಾರತೀಯ ನಾರಿಯರಲ್ಲಿ ಹಲವಾರು ಮಹಿಳೆಯರು ತಮ್ಮದೇ ಆದ ಸಾಧನೆಯನ್ನು ಮಾಡುವುದರ ಮೂಲಕ ಇತಿಹಾಸದ ಪುಟದಲ್ಲಿ ತಮ್ಮ ಹೆಸರನ್ನು ಚಿರಸ್ತಾಯನಾಗಿ ಮಾಡಿದ್ದಾರೆ .ಹೆತ್ತಮನೆಗೂ ಹೊತ್ತ ಮನಿಗೂ ಕೀರ್ತಿ ತರುವುದರ ಮೂಲ ಕ ಗಂಡನ ಮನೆಗೆ ಹೋದ ಮೇಲೆ ಹೆಣ್ಣಾದವಳು ಹೇಗೆ ಬದುಕಬೇಕೆಂ ಬುದನು ತೋರಿಸಿಕೊಟ್ಟು .ಎಷ್ಟೇ ಸಮಸ್ಯೆಗಳು ಬಂದರು ಅವುಗಳನ್ನು ಧೈರ್ಯದಿಂದ ತನ್ನ ಕಾರ್ಯದ ಮೂಲಕ ಎದುರಿಸಿ ಶ್ರೀಶೈಲ ಮಲ್ಲಿ ಕಾರ್ಜುನ ಪರಮ ಭಕ್ತಳು ತನ್ನ ಭಕ್ತಿಯ ನಿಷ್ಠೆ. ಸರಳ ಸಜ್ಜನಿಕೆಯ ಕಾಯಕ ಮತ್ತು ಭಕ್ತಿ ಮೂಲಕ ಶಿವನ ದರ್ಶನ ಪಡೆದ ಮಾಹಾ ಸಾಧ್ವಿ ಶಿವಶರಣೆ .ನಾಗರೆಡ್ಡಿ ಮತ್ತು ಗೌರ ಮ್ಮ ದಂಪತಿಗಳ ನೆಚ್ಚಿನ ಮಗಳು ಮೈದುನ ವೇಮನ ರವರನ್ನು. ಮಹಾಯೊಗಿ ವೇಮನರನ್ನಾಗಿ ಮಾಡಿದ. ರೆಡ್ಡಿ ಸಮಾಜದ ಬಂಗಾರದ ಕಡ್ಡಿ ಹೇಮರೆಡ್ಡಿ ಮಲ್ಲಮ್ಮ ಎಂದು ದಿನಾಂಕ 10.05.202 6 ರಂದು ರಾಯಚೂರು ನಗರದ ಪೂರ್ಣಿಮಾ ಆಯುರ್ವೇದ ವೈದ್ಯಕೀಯ ಮಹಾ ವಿದ್ಯಾಲಯ ಆಸ್ಪತ್ರೆ ಹಾಗೂ ಸಂಶೋಧನಾ ಕೇಂದ್ರದ ದಲ್ಲಿ ಬೆಳಗ್ಗೆ 9:00 ಗಂಟೆಗೆ ನಡೆದ ಹೇಮರೆಡ್ಡಿ ಮಲ್ಲ



ಮ್ಮ ಜಯಂತಿಯ ಕಾರ್ಯಕ್ರಮ ವನ್ನ ಜ್ಯೋತಿಯನ್ನು ಬೆಳಗಿಸುವ ಮೂಲಕ ಉದ್ಘಾಟಿಸಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಸಹ ಕಾರ್ಯ ದರ್ಶಿಯಾದ ಡಾ . ದಂಡಪ್ಪ ಬಿರಾದಾರ. ಮಾತನಾಡಿದರು. ಅವರು ಮುಂದುವರೆದು ಮಾತನಾಡುತ್ತಾ. ಭರಮ್ ರೆಡ್ಡಿಯ ನೆಚ್ಚಿನ ಮಡದಿಯಾಗಿ ಅತ್ತಿ ನಾದಿನಿಯರ ಕಿರುಕುಳವನ್ನು ಎಷ್ಟೇ ಕೊಟ್ಟರು ಅವುಗಳನ್ನ ಸಕಾರಾತ್ಮಕ ರೀತಿಯಲ್ಲಿ ಸ್ವೀಕರಿಸಿ .ಕೊನೆಗೆ ಅವರ ಮಾಡಿದ ತಪ್ಪು. ಅವರಿಂದಲೇ ಅರಿವಿಗೆ ಬಂದ ಮೇಲೆ ಪುನಃ ಹೇಮರೆಡ್ಡಿ ಮಲ್ಲಮ್ಮನ ದೈವ ಕೃಪೆ. ಶ್ರೀಶೈಲಿನ ಮಲ್ಲಿಕಾ ರ್ಜುನ ದೈವದಿಂದ ಮಲ್ಲಮ್ಮನ ಗಂಡನ ಮನೆಗೆ ಅತ್ಯಂತ ಚೆನ್ನಾಗಿ ಮಾಡುವಲ್ಲಿ ಪ್ರಮುಖ ಪಾತ್ರವನ್ನು ವಹಿಸಿ .ಜೊತೆಗೆ ಮೈದುನ ವೇಮನರು ಅಡ್ಡದಾರಿ ಹಿಡಿದು ಪರ ಸ್ತ್ರೀಯರ ಸಂಗದಿಂದ ಬದುಕನ್ನು ಕೆಟ್ಟಪಥಕ್ಕೆ ತುಳಿದಾಗ ನಂತರ ಅವರಿಗೆ ಸುಜ್ಞಾನ ಪಥವನ್ನು ತುಳಿಯುವಂತೆ ಮಾಡಿ ಸನ್ಮಾರ್ಗಕ್ಕೆ ತಂದು ಮಹಾಯೋಗಿಯನ್ನ ಮಾಡಿದವಳು ಮಹಾಸ್ತ್ರೀ ಶಿವಶರಣೆ ಹೇಮಡ್ಡಿ ಮಲ್ಲಮ್ಮ. ಹೇಮರೆಡ್ಡಿ ಮಲ್ಲಮರು ಒಂದು ಮಾತನ್ನು ಹೇಳುತ್ತಿದ್ದರು ಸಂಪತ್ತಿಗೆ ಸೊಕ್ಕಬೇಡಿ ಸಿರಿ ಬಂದ ಕಾಲಕ್ಕೆ ಮೈಮರೆತು ಹಿಗ್ಗದೆ .ದಾನ ಧರ್ಮ ಮಾಡುವುದರ ಮೂಲಕ ತನ್ನ ಬಳಗದವರ ದಾನಗುಣವನ್ನು ಬೆಳೆಸಿಕೊಳ್ಳಬೇಕೆಂದು ತನ್ನ ಬಳಗದವರಿಗೆ ಹ ಹೇಳಿದ ಮಹಾಸ್ತ್ರೀ ಶಕ್ತಿಯ ಪ್ರತೀಕವೇ ಹೇಮರೆಡ್ಡಿ ಮಲ್ಲಮ್ಮ ಆಗಿದ್ದಾರೆ ಎಂದು ಡಾ . ಬಿರಾದಾರ್ ಹೇಳಿದರು. ಡಾ. ಸಂತೋಷ್ ಕುಮಾರ್ ಪ್ರಾಸ್ತಾವಿ ಕವಾಗಿ. ಮಾತನಾಡಿ ಸಕಲರನ್ನ ಸ್ವಾಗತಿಸಿದರು. ಈ ಸಂದರ್ಭದಲ್ಲಿ ಡಾ. ವಂಶಿ ಕೃಷ್ಣ. ಡಾ. ಅಕ್ಷಯ. ವಿನಯ ಹೆಗಡೆ ಮತ್ತು ಕಾಲೇಜಿನ ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

ಟಿಎಂಎಇಎಸ್ ಪಾಲಿಟೆಕ್ನಿಕ್‌ನಲ್ಲಿ ಎಸ್‌ಎಂಐಒಆರ್‌ಇ ಕ್ಯಾಂಪಸ್ ಸಂದರ್ಶನ 35 ವಿದ್ಯಾರ್ಥಿಗಳ ಪೈಕಿ 32 ಮಂದಿ ಲಿಖಿತ ಪರೀಕ್ಷೆಯಲ್ಲಿ ಆಯ್ಕೆ



ಹೊಸಪೇಟೆ / ವಿಜಯನಗರ ,ಮೇ.10-

ನಗರದ ಟಿಎಂಎಇಎಸ್ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ಇಂದು ಎಸ್‌ಎಂಐಒಆರ್‌ಇ ಸಂಸ್ಥೆಯ ಕ್ಯಾಂಪಸ್ ಸಂದರ್ಶನ ಯಶಸ್ವಿಯಾಗಿ ನಡೆಯಿತು. ಈ ಸಂದರ್ಶನದಲ್ಲಿ ಪಾಲಿಟೆಕ್ನಿಕ್ ಹಾಗೂ ಸಂಡೂರ್ ಪಾಲಿಟೆಕ್ನಿಕ್ ವಿದ್ಯಾರ್ಥಿಗಳೂ ಭಾಗವಹಿಸಿದ್ದರು.

ಮೆಕ್ಯಾನಿಕಲ್, ಸಿವಿಲ್, ಎಲೆಕ್ಟ್ರಿಕಲ್ ಮತ್ತು ಮೈನಿಂಗ್ ಎಂಜಿನಿಯರಿಂಗ್ ವಿಭಾಗಗಳ ವಿದ್ಯಾರ್ಥಿಗಳಿಗೆ ಆಯೋಜಿಸಿದ್ದ ಈ ಕ್ಯಾಂಪಸ್ ಸಂದರ್ಶನದಲ್ಲಿ ಒಟ್ಟು 35 ವಿದ್ಯಾರ್ಥಿಗಳು ಭಾಗವಹಿಸಿದ್ದರು. ಇವರಲ್ಲಿ 32 ವಿದ್ಯಾರ್ಥಿಗಳು ಲಿಖಿತ ಪರೀಕ್ಷೆಯಲ್ಲಿ ಆಯ್ಕೆಯಾಗಿದ್ದು, ಉತ್ತಮ ಸಾಧನೆ ತೋರಿದ್ದಾರೆ.

ಆಯ್ಕೆಯಾದ ವಿದ್ಯಾರ್ಥಿಗಳಿಗೆ ಕಾಲೇಜು ಆಡಳಿತ ಮಂಡಳಿ ಹಾಗೂ ಪ್ಲೇಸ್‌ಮೆಂಟ್ ಸೆಲ್ ವತಿಯಿಂದ ಅಭಿನಂದನೆ ಸಲ್ಲಿಸಿ, ಮುಂದಿನ ಹಂತದ ಸಂದರ್ಶನ ಮತ್ತು ಭವಿಷ್ಯದ ಉದ್ಯೋಗ ಜೀವನಕ್ಕೆ ಶುಭ ಹಾರೈಸಲಾಯಿತು.

ಈ ಸಂದರ್ಭದಲ್ಲಿ ಸಂಸ್ಥೆಯ ಪ್ರತಿನಿಧಿಗಳಾದ ಪವನ್ ಮಹರ್ಷಿ, ಮಂಜುನಾಥ್, ಸಂದೀಪ್ ದೇಶಪಾಂಡೆ, ಕಾರ್ತಿಕ್ ಎಸ್., ದೀಪಕ್ ಕುಕ್ಕೆ, ಅನಿಲ್ ಕುಮಾರ್ರ ಹೊನ್ನೂರುಸ್ವಾಮಿ, ಪ್ರಕಾಶ್ ಬಾಬು ಆರ್., ಪ್ರಶಾಂತ್ ಭಾರದ್ವಾಜ್ ಹಾಗೂ ಯೋಗೇಶ್ ಎ. ಉಪಸ್ಥಿತರಿದ್ದು, ವಿದ್ಯಾರ್ಥಿಗಳಿಗೆ ಉದ್ಯೋಗಾವಕಾಶಗಳು ಮತ್ತು ವೃತ್ತಿ ಬೆಳವಣಿಗೆ ಕುರಿತು ಮಾರ್ಗದರ್ಶನ ನೀಡಿದರು.



ನೀರಿನ ಪೈಪ್ ಒಡೆದು ರಸ್ತೆಯಲ್ಲಿ ನೀರು : ಸಂಚಾರಕ್ಕೆ ತೀವ್ರ ತೊಂದರೆ; ಅಪಾಯದ ಅಂಚಿನಲ್ಲಿ ವಾಹನ ಸವಾರರು

ಬಳ್ಳಾರಿ / ಕಂಪ್ಲಿ ,ಮೇ.10-

ಪಟ್ಟಣದ ಕಂಪ್ಲಿ-ಗಂಗಾವತಿ ರಾಜ್ಯ ಹೆದ್ದಾರಿ 29ರ ಹಳೆ ಚೆಕ್‌ಪೋಸ್ಟ್ ಸಮೀಪ ನೀರಿನ ಪೈಪ್‌ಲೈನ್ ಒಡೆದು ರಸ್ತೆ ಮೇಲೆ ನಿರಂತರವಾಗಿ ನೀರು ಹರಿಯುತ್ತಿದ್ದು, ಅಳತೆಯಿಲ್ಲದ ಗುಂಡಿ ನಿರ್ಮಾಣವಾಗಿ ವಾಹನ ಸವಾರರಿಗೆ ತೀವ್ರ ತೊಂದರೆ ಉಂಟಾಗಿದೆ.

ಈ ರಸ್ತೆಯಲ್ಲಿ ಪ್ರತಿದಿನ ಲಾರಿ, ಬಸ್, ಕಾರು ಹಾಗೂ ದ್ವಿಚಕ್ರ ವಾಹನಗಳು ಸೇರಿದಂತೆ ನೂರಾರು ವಾಹನಗಳು ಸಂಚರಿಸುತ್ತಿದ್ದು, ನೀರು ನಿಂತ ಪರಿಣಾಮ ರಸ್ತೆ ಮತ್ತಷ್ಟು ಹದಗೆಡುವ ಭೀತಿ ಎದುರಾಗಿದೆ. ಈಗಾಗಲೇ ರಸ್ತೆ ಮಧ್ಯೆ ದೊಡ್ಡ ಗುಂಡಿ ಉಂಟಾಗಿದ್ದು, ವಾಹನ ಸವಾರರು ಅಪಾಯದ ನಡುವೆ ಸಂಚರಿಸುವಂತಾಗಿದೆ ಎಂದು ಸಾರ್ವಜನಿಕರು ದೂರಿದ್ದಾರೆ.

ಅನೇಕ ದಿನಗಳಿಂದ ಸಮಸ್ಯೆ ಮುಂದುವರಿದಿದ್ದರೂ ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಪುರಸಭೆ ಅಧಿಕಾರಿಗಳು ಸಮರ್ಪಕ ಕ್ರಮ ಕೈಗೊಂಡಿಲ್ಲ ಎಂದು ಸ್ಥಳೀಯರು ಆರೋಪಿಸಿದ್ದಾರೆ. ಪ್ರತಿದಿನ ವಾಹನ ದಟ್ಟಣೆ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಯಾವುದೇ ಕ್ಷಣದಲ್ಲಿ ಅಪಘಾತ ಸಂಭವಿಸುವ ಸಾಧ್ಯತೆ ಇದೆ ಎಂಬ ಆತಂಕ ವ್ಯಕ್ತವಾಗಿದೆ.

ವಿಶೇಷವಾಗಿ ರಾತ್ರಿ ವೇಳೆ ಸಮರ್ಪಕ ಬೆಳಕಿನ ವ್ಯವಸ್ಥೆ ಇಲ್ಲದ ಕಾರಣ ವಾಹನ ಸವಾರರು ಗುಂಡಿಯನ್ನು ಗಮನಿಸದೇ ಅಪಾಯಕ್ಕೆ ಸಿಲುಕುವ ಪರಿಸ್ಥಿತಿ ನಿರ್ಮಾಣವಾಗಿದೆ. ಒಂದು ವೇಳೆ ಅಪಘಾತ ಸಂಭವಿಸಿ ಪ್ರಾಣಹಾನಿಯಾದರೆ ಯಾರು ಹೊಣೆ ಎಂದು ಸಾರ್ವಜನಿಕರು ಪ್ರಶ್ನಿಸಿದ್ದಾರೆ.

ನಿಮ್ಮೂರು ಸುದ್ದಿ

ಸಂಪಾದಕೀಯ

ವಿಜಯದ ಹಾದಿಯ ಮುಳ್ಳುಗಳು!

ತಮಿಳುನಾಡಿನಲ್ಲಿ ನಡೆಯುತ್ತಿರುವ ರಾಜಕೀಯ ಬೆಳವಣಿಗೆ ಒಂದು ಥ್ರಿಲ್ಲರ್ ಸಿನೆಮಾ ಕತೆಯನ್ನು ಸರಿಗಟ್ಟುವಂತಿದೆ. ಸೂಪರ್ ಸ್ಟಾರ್ ವಿಜಯ್ ಈ ರಾಜಕೀಯ ಥ್ರಿಲ್ಲರ್ ಕತೆಯ ಕೇಂದ್ರ ಬಿಂದುವಾಗಿರುವುದರಿಂದ ದೇಶದ ಕಣ್ಣು ತಮಿಳು ನಾಡಿನ ಕಡೆಗಿದೆ. ತಮಿಳು ನಾಡಿನಲ್ಲಿ ನಡೆಯುವ ರಾಜಕೀಯ ಬೆಳವಣಿಗೆಗಳನ್ನು ಕೇಂದ್ರ ಸರಕಾರ ಎಚ್ಚರದ ಕಣ್ಣಿನಿಂದ ಗಮನಿಸುತ್ತಿದೆ. ಕೇಂದ್ರ ಸರಕಾರದ ಸರ್ವಾಧಿಕಾರಿ ದೋರಣೆಗೆ ಪ್ರಬಲ ಪ್ರತಿರೋಧವನ್ನು ತೋರುತ್ತಾ ಬಂದಿರುವ ರಾಜ್ಯ ತಮಿಳು ನಾಡು. ಡಿಎಂಕೆ ಅಧಿಕಾರದಲ್ಲಿರುವ ಅಷ್ಟೂ ಸಮಯ ಸರಕಾರ ಮತ್ತು ರಾಜ್ಯಪಾಲರ ನಡುವಿನ ತಿಕ್ಕಾಟ ಚರ್ಚೆಯ ವಿಷಯವಾಗಿತ್ತು. ವಿವಾದ ಸುಪ್ರೀಂಕೋರ್ಟ್ ಮೆಟ್ಟಿಲನ್ನೂ ಏರಿತ್ತು. ರಾಜ್ಯಪಾಲರನ್ನು ಬಳಸಿಕೊಂಡು ತಮಿಳುನಾಡು ಸರಕಾರವನ್ನು ನಿಯಂತ್ರಿಸುವ ಕೇಂದ್ರ ಸರಕಾರದ ಪ್ರಯತ್ನವನ್ನು ಡಿಎಂಕೆ ಭಾಗಶಃ ವಿಫಲಗೊಳಿಸಿತ್ತು. ಮಾತ್ರವಲ್ಲ ಒಕ್ಕೂಟ ವ್ಯವಸ್ಥೆಯನ್ನು ದುರ್ಬಲಗೊಳಿಸುವ ನೀತಿಗಳ ವಿರುದ್ಧ ದೊಡ್ಡ ಸ್ವರದಲ್ಲಿ ಧ್ವನಿಯೆತ್ತಿ ಕೇಂದ್ರ ಸರಕಾರಕ್ಕೆ ಮುಜುಗರವನ್ನುಂಟು ಮಾಡಿತ್ತು. ತಮಿಳು ಅಸ್ಮಿತೆಗಳ ವಿರುದ್ಧ ರಾಜ್ಯಪಾಲರು ನೀಡಿದ ಹೇಳಿಕೆಗಳನ್ನು ತಮಿಳರು ಉಗ್ರವಾಗಿ ಪ್ರತಿಭಟಿಸಿದ್ದರು. ತಮಿಳರನ್ನು ಸೆಳೆಯಲು ಪ್ರಧಾನಿ ಮೋದಿಯವರು ಬಹುರೂಪಿ ವೇಷಗಳನ್ನು ಹಾಕಬೇಕಾಯಿತು. ಪಂಚೆ, ಶಾಲು ಧರಿಸಿ ತಮಿಳರನ್ನು ಸೆಳೆಯಲು ಪ್ರಯತ್ನಿಸಿದ್ದರು. ಸೆಂಗೋಲ್‌ನ್ನು ನೂತನ ಸಂಸತ್‌ನಲ್ಲಿ ತಂದಿರಿಸಿ ತಮಿಳರ ಮನಸ್ಸನ್ನು ಗೆಲ್ಲುವ ಪ್ರಯತ್ನ ನಡೆಸಿದ್ದರು. ಅಣ್ಣಾಮಲೈಯನ್ನು ಮುಂದಿಟ್ಟು ನಡೆಸಿದ ಪ್ರಯತ್ನವೂ ವಿಫಲವಾಯಿತು.ಅಣ್ಣಾಮಲೈ ಜೊತೆಗೆ ಬಿಜೆಪಿಯೂ ತಮಿಳರ ಪಾಲಿಗೆ ತಮಾಷೆಯ ವಸ್ತುವಾಯಿತು. ಎಡಿಎಂಕೆಯಿಲ್ಲದೆ ತಮಿಳುನಾಡಿನಲ್ಲಿ ಬಿಜೆಪಿಗೆ ಅಸ್ತಿತ್ವವೇ ಇರಲಿಲ್ಲ. ಈ ಬಾರಿಯ ಚುನಾವಣೆಯಲ್ಲಿ ತಮಿಳರು ಆಡಳಿತ ವಿರೋಧಿ ಮತಗಳನ್ನು ಚಲಾಯಿಸಿದರಾದರೂ ಅವರು ಈ ಹಿಂದೆ ಮಾಡಿದಂತೆ ಡಿಎಂಕೆಗೆ ಪರ್ಯಾಯವಾಗಿ ಎಡಿಎಂಕೆಯನ್ನು ಆರಿಸಲಿಲ್ಲ ಎನ್ನುವುದು ಗಮನಾರ್ಹವಾಗಿದೆ. ಎರಡು ವರ್ಷಗಳ ಹಿಂದೆ ಸ್ಥಾಪನೆಯಾದ ವಿಜಯ್ ನೇತೃತ್ವದ ಟಿವಿಕೆಯನ್ನು ಆರಿಸಿಕೊಂಡರು. ಎಡಿಎಂಕೆ ಮೂಲಕ ತಮಿಳು ನಾಡಿನಲ್ಲಿ ಅಧಿಕಾರದ ಕನಸು ಕಾಣುತ್ತಿದ್ದ ಬಿಜೆಪಿಗೆ ತಮಿಳರು ಮಾಡಿದ ದೊಡ್ಡ ಮುಖಭಂಗವಾಗಿದೆ.

ವಿಪರ್ಯಾಸವೆಂದರೆ, ತಮಿಳುನಾಡಿನ ಚುಕ್ಕಾಣಿಯನ್ನು ಕೈಗೆತ್ತಿಕೊಳ್ಳುವ ಮೊದಲೇ ಟಿವಿಕೆ ನಾಯಕ ವಿಜಯ್‌ಗೆ ರಾಜ್ಯಪಾಲರ ಜೊತೆಗೆ ಹಗ್ಗಜಗ್ಗಾಟ ಮಾಡಬೇಕಾಗಿದೆ. ಸರಕಾರ ರಚಿಸುವ ಹಕ್ಕು ಮಂಡಿಸಲು ಹೋಗಿ ಮೂರು ಬಾರಿಯೂ ಅವರು ಬರಿಗೈಯಲ್ಲಿ ಮರಳಿದ್ದಾರೆ. ಸಾಧಾರಣವಾಗಿ ಅತಿ ದೊಡ್ಡ ಪಕ್ಷವು ಸರಕಾರ ರಚನೆಗೆ ಹಕ್ಕು ಮಂಡಿಸುವುದು ಸಂಪ್ರದಾಯವಾಗಿದೆ. ತಮಿಳುನಾಡಿನಲ್ಲಿ ಇತರ ಯಾವುದೇ ಪಕ್ಷಗಳು ಅಧಿಕಾರ ರಚನೆಯನ್ನು ಮಾಡುವ ಇಂಗಿತವನ್ನು ವ್ಯಕ್ತಪಡಿಸಿಲ್ಲ. ಬಹುಮತ ಸಾಬೀತು ಮಾಡಲು ನನಗೆ ಅವಕಾಶ ನೀಡಿ ಎನ್ನುವ ಅಪೇಕ್ಷೆಯೊಂದಿಗೆ ವಿಜಯ್ ಹಕ್ಕು ಮಂಡಿಸಿದಾಗ ಪೂರ್ಣ ಬಹುಮತದೊಂದಿಗೆ ಬಂದರೆ ಮಾತ್ರ ಅವಕಾಶ ಎಂದು ರಾಜ್ಯಪಾಲರು ಕಠಿಣ ನಿಲುವನ್ನು ತಳೆದಿದ್ದಾರೆ. ಬಹುಮತ ಸಾಬೀತಿಗೆ ಮುನ್ನವೇ ಜನರ ಆದೇಶವನ್ನು ನಿರ್ಲಕ್ಷಿಸಿ ತಮಿಳುನಾಡಿನಲ್ಲಿ ರಾಷ್ಟ್ರಪತಿ ಆಡಳಿತವನ್ನು ಹೇರಲು ಅವರು ತುದಿಗಾಲಿನಲ್ಲಿ ನಿಂತಂತಿದೆ. ರಾಜ್ಯಪಾಲರ ನಿಲುವಿನ ಹಿಂದೆ ಕೇಂದ್ರ ಸರಕಾರದ ಒತ್ತಡವಿದೆ ಎನ್ನುವುದು ಗುಟ್ಟಿನ ವಿಷಯವೇನೂ ಅಲ್ಲ. ಟಿವಿಕೆಯು ಅಧಿಕಾರ ಹಿಡಿಯಲು ಎಡಿಎಂಕೆಯ ಸ್ನೇಹಕ್ಕೆ ಮುಂದಾಗಿಲ್ಲ. ಎಡಿಎಂಕೆಯ ಕೆಲವು ಶಾಸಕರು ಸ್ವತಂತ್ರವಾಗಿ ಟಿವಿಕೆಯ ಜೊತೆಗೆ ಕೈ ಜೋಡಿಸಲು ಸಿದ್ಧರಿದ್ದಾರಾದರೂ, ಅವರನ್ನು ಈಗಾಗಲೇ ಪುದುಚೇರಿಗೆ ಸ್ಥಳಾಂತರಿಸಲಾಗಿದೆ. ವಿಜಯ್‌ಗೆ ಈಗಾಗಲೇ ಕಾಂಗ್ರೆಸ್ ಮತ್ತು ಎಡಪಕ್ಷಗಳು ತಮ್ಮ ಬೆಂಬಲವನ್ನು ಘೋಷಿಸಿವೆ. ವಿಡುದಲೈ ಚಿರುತೈಗಲ್ ಕಚ್ಚಿ (ವಿಸಿಕೆ)ಯು ಇನ್ನೂ ತನ್ನ ಬೆಂಬಲವನ್ನು ಅಧಿಕೃತಪಡಿಸಿಲ್ಲ. ಬೆಂಬಲ ನೀಡಲು ಅದು ಕೆಲವು ಬೇಡಿಕೆಗಳನ್ನು ಮುಂದಿಟ್ಟಿದೆ. ಸದ್ಯಕ್ಕೆ ಯಾರನ್ನಾದರೂ ಸರಕಾರ ರಚಿಸಲು ಆಹ್ವಾನಿಸಬಹುದು ಎಂದಾದರೆ ಟಿವಿಕೆಯನ್ನು ಬಿಟ್ಟು ಬೇರೆ ಆಯ್ಕೆ ರಾಜ್ಯಪಾಲರ ಬಳಿಯಿಲ್ಲ. ಇಷ್ಟಾದರೂ ಅವರು ಟಿವಿಕೆಗೆ ಸರಕಾರ ರಚಿಸಲು ಆಹ್ವಾನ ನೀಡಲು ಸಿದ್ಧವಾಗಿಲ್ಲ. ಟಿವಿಕೆ ಬಹುಮತವನ್ನು ಸಾಬೀತು ಪಡಿಸಬೇಕಾದುದು ಸದನದಲ್ಲಿ. ಅದಕ್ಕೆ ವೇದಿಕೆ ನಿರ್ಮಾಣ ಮಾಡಿಕೊಡುವುದಷ್ಟೇ ರಾಜ್ಯಪಾಲರ ಕೆಲಸ. ಆದರೆ ರಾಜ್ಯಪಾಲರು ತನ್ನ ಮುಂದೆಯೇ ಬಹುಮತವನ್ನು ಸಾಬೀತು ಪಡಿಸಿ ಎಂದು ಟಿವಿಕೆಯನ್ನು ಒತ್ತಾಯಿಸುತ್ತಿದ್ದಾರೆ. ಒಂದು ವೇಳೆ ಬಿಜೆಪಿ ಅಥವಾ ಎಡಿಎಂಕೆ ದೊಡ್ಡ ಪಕ್ಷವಾಗಿ ಹೊರ ಹೊಮ್ಮಿ ರಾಜ್ಯಪಾಲರ ಮುಂದೆ ಬಂದಿದ್ದರೆ ಅವರು ಇಷ್ಟೇ ಕಠಿಣ ನಿಲುವನ್ನು ತಳೆಯುತ್ತಿದ್ದರೆ?

ಇದೇ ಸಂದರ್ಭದಲ್ಲಿ ಕೇಂದ್ರ ಸರಕಾರ ವಿಜಯ್‌ರನ್ನೇ ಗುರಿಯಾಗಿಸಿಕೊಂಡು ತನಿಖಾ ಸಂಸ್ಥೆಗಳನ್ನು ದುರುಪಯೋಗಪಡಿಸಿಕೊಂಡರೆ ಅದನ್ನು ತಾಳಿಕೊಳ್ಳುವ ಗಟ್ಟಿತನ ಟಿವಿಕೆ ಬಳಿಯಿದೆಯೆ? ಈಗಾಗಲೇ ದಿಲ್ಲಿಯಲ್ಲಿ ಆಮ್ ಆದ್ಮಿ ಪಕ್ಷಕ್ಕೆ ಒದಗಿದ ದುಸ್ಥಿತಿಯನ್ನು ನಾವು ನೋಡುತ್ತಿದ್ದೇವೆ. ಕೆಲವು ವಿಷಯಗಳಲ್ಲಿ ಟಿವಿಕೆ ಆಮ್ ಆದ್ಮಿಯನ್ನೇ ಹೋಲುತ್ತಿದೆ. ಕಾಲದ ತುರ್ತಿಗೆ ತಕ್ಕಂತೆ ಏಕಾಏಕಿ ತಲೆಯೆತ್ತಿ ಒಮ್ಮೆಲೆ ಅಧಿಕಾರ ಹಿಡಿದ ಪಕ್ಷ ಟಿವಿಕೆ. ಡಿಎಂಕೆಗೆ ಇರುವ ಹೋರಾಟದ ಹಿನ್ನೆಲೆ ಈ ಪಕ್ಷಕ್ಕಿಲ್ಲ. ಸೈದ್ಧಾಂತಿಕವಾಗಿಯೂ ಅಷ್ಟೊಂದು ಗಟ್ಟಿಯಾದ ಹಿನ್ನೆಲೆಯಿರುವ ಪಕ್ಷವಲ್ಲ. ನಿಜಕ್ಕೂ ತಾನು ನಡೆಸುತ್ತಿರುವ ಸಂಘರ್ಷ ರಾಜ್ಯಪಾಲರ ಜೊತೆಗಲ್ಲ, ಕೇಂದ್ರ ಸರಕಾರದ ಜೊತೆಗೆ ಎನ್ನುವ ಎಚ್ಚರಿಕೆಯೊಂದಿಗೆ ವಿಜಯ್ ಹೆಜ್ಜೆಯನ್ನು ಮುಂದಿಡಬೇಕಾಗಿದೆ. ಆಪತ್‌ಕಾಲದಲ್ಲಿ ರಾಜಕೀಯದಲ್ಲಿ ಡ್ರ್ಯೂಪ್‌ಗಳನ್ನು ಬಳಸಿ ಬಚಾವಾಗುವುದಕ್ಕಾಗುವುದಿಲ್ಲ.

ಪಡೆಗಳ ನಡುವೆ ನನ್ನದೊಂದು ಕೊಡೆ ಎನ್ನುವಂತೆ ದೇಶ ಪಂಚರಾಜ್ಯದ ಫಲಿತಾಂಶಗಳ ಬಗ್ಗೆ ಚರ್ಚೆ ನಡೆಸುತ್ತಿರುವಾಗ, ಇತ್ತ ಕರ್ನಾಟಕದ ಶೃಂಗೇರಿಯಲ್ಲಿ ಯಾವ ಚುನಾವಣೆ ನಡೆಯದೆಯೇ ಏಕಾಏಕಿ ಅಧಿಕಾರ ಪಲ್ಲಟವಾಗಿದೆ. ಮೊನ್ನೆ ಮೊನ್ನೆಯವರಿಗೆ ಶೃಂಗೇರಿ ಕ್ಷೇತ್ರದ ಶಾಸಕರೆಂದು ಗುರುತಿಸಲ್ಪಟ್ಟಿದ್ದ ಕಾಂಗ್ರೆಸ್ ಪಕ್ಷದ ರಾಜೇಗೌಡರು ಏಕಾಏಕಿ ಮಾಜಿಯಾಗಿ, ಬಿಜೆಪಿಯ ಜೀವರಾಜ್ ಹಾಲಿ ಶಾಸಕರಾಗಿ ಕಂಗೊಳಿಸಿದ್ದಾರೆ. ಬುಧವಾರ ವಿಧಾನಸೌಧದಲ್ಲಿರುವ ಸ್ಪೀಕರ್ ಕಚೇರಿಯಲ್ಲಿ ನೂತನ ಶಾಸಕ ಜೀವರಾಜ್‌ಗೆ ಸ್ಪೀಕರ್ ಅವರು ಪ್ರಮಾಣವಚನವನ್ನೂ ಬೋಧಿಸಿಯಾಗಿದೆ. ಆದರೆ ಕಳೆದೆರಡು ದಿನಗಳಿಂದ ಹಾಲಿಯಾಗಿರುವ ಜೀವರಾಜ್ ಅವರ ಶಾಸಕ ಸ್ಥಾನ ಎಲ್ಲಿಯವರೆಗೆ ಜೀವದಲ್ಲಿರುತ್ತದೆ ಎನ್ನುವುದರ ಬಗ್ಗೆ ಸ್ವತಃ ಸ್ಪೀಕರ್‌ಗೆ ಸ್ಪಷ್ಟವಿದ್ದಂತಿಲ್ಲ. ಪ್ರಮಾಣ ವಚನ ಬೋಧನೆಗೆ ಸ್ಪೀಕರ್ ಆರಂಭದಲ್ಲಿ ಹಿಂಜರಿದಂತಿತ್ತು. ಆದರೆ ನಕ್ಷತ್ರಿಕನಂತೆ ಬೆನ್ನು ಬಿಡದೆ ಕಾಡಿದ ಡಿ. ಎನ್ . ಜೀವರಾಜ್, ಮಧ್ಯಪ್ರವೇಶಿಸುವುದಕ್ಕಾಗಿ ರಾಜ್ಯಪಾಲರಿಗೆ ಮನವಿ ಸಲ್ಲಿಸಿದ್ದರು. ಅವರ ಸೂಚನೆಯ ಮೇರೆಗೆ ಸ್ಪೀಕರ್ ಅವರು ಜೀವರಾಜ್‌ಗೆ ಪ್ರಮಾಣ ವಚನ ಬೋಧನೆ ಮಾಡಿದ್ದಾರೆ. ಸದ್ಯಕ್ಕೆ ಜೀವರಾಜ್ ಅಧಿಕೃತವಾಗಿ ಶಾಸಕರಾಗಿದ್ದಾರೆ ಎಂದಾದರೆ, ಈವರೆಗೆ ರಾಜೇಗೌಡರು ಅಕ್ರಮವಾಗಿ ಶಾಸಕ ಸ್ಥಾನವನ್ನು ಅನುಭವಿಸಿದ್ದಾರೆ ಎಂದಾಯಿತಲ್ಲವೆ? ಹಾಲಿ ಶಾಸಕರು ಮಾಜಿ ಆಗುವುದರೊಂದಿಗೆ ಪ್ರಕರಣ ಮುಗಿಯುವುದು ಹೇಗೆ? ಚುನಾವಣೆಯ ಫಲಿತಾಂಶವನ್ನು ರಾಜೇಗೌಡರು ಹೈಜಾಕ್ ಮಾಡಿದ್ದಾರೆ ಎಂದಾದರೆ ಅದಕ್ಕಾಗಿ ಅವರಿಗೆ ಶಿಕ್ಷೆಯಾಗಬೇಡವೆ? ಒಂದು ಮನೆಯಲ್ಲಿ ಕಳ್ಳತನದಿಂದ ವಸ್ತುವನ್ನು ಅಪಹರಿಸಲಾಗಿದೆ ಎನ್ನುವುದು ಸಾಬೀತಾದ ಬಳಿಕ ಅಪಹರಿಸಿದ ವ್ಯಕ್ತಿಯನ್ನು ಗುರುತಿಸಿ ಆತನನ್ನು ಕಟಕಟೆಯಲ್ಲಿ ನಿಲ್ಲಿಸುವ ಅಗತ್ಯವಿಲ್ಲವೆ? ಎನ್ನುವ ಪ್ರಶ್ನೆಗಳಿಗೆ ಈವರೆಗೆ ಉತ್ತರ ದೊರಕಿಲ್ಲ.

2023ರ ವಿಧಾನಸಭಾ ಚುನಾವಣೆಯಲ್ಲಿ ಶೃಂಗೇರಿ ಕ್ಷೇತ್ರದಿಂದ ಕಾಂಗ್ರೆಸ್ ಪಕ್ಷದ ರಾಜೇಗೌಡರು 201 ಮತಗಳ ಅಂತರದಿಂದ ಗೆಲುವು ಸಾಧಿಸಿದ್ದರು. ಆಗ ಚಲಾವಣೆ ಆದ ಅಂಚೆ ಮತಗಳು 1,822. ಇದರಲ್ಲಿ ಜೀವರಾಜ್ ಅವರು 692 ಮತ ಪಡೆದಿದ್ದರೆ ರಾಜೇಗೌಡರು 569 ಮತಗಳನ್ನು ಗಳಿಸಿದ್ದರು. 279 ಮತ ತಿರಸ್ಕೃತಗೊಂಡಿದ್ದವು. ಅಂದರೆ ತಿರಸ್ಕೃತಗೊಂಡ ಮತಗಳು ಗೆಲುವಿನ ಅಂತರದ ಮತಕ್ಕಿಂತ ಜಾಸ್ತಿಯಾಗಿದ್ದವು. ಆದುದರಿಂದ ಮರುಎಣಿಕೆಗಾಗಿ ಜೀವರಾಜ್ ಆಗ್ರಹಿಸಿದ್ದರು. ಆದರೆ ಚುನಾವಣಾಅಧಿಕಾರಿ ಅದಕ್ಕೆ ಒಪ್ಪದೆ ರಾಜೇಗೌಡರನ್ನೇ ವಿಜೇತ ಎಂದು ಘೋಷಿಸಿದ್ದರು. ಇದರ ವಿರುದ್ಧ ಸೋತ ಅಭ್ಯರ್ಥಿ ಜೀವರಾಜ್ ನ್ಯಾಯಾಲಯದ ಮೆಟ್ಟಿಲೇರಿದ್ದರು. ಅರ್ಜಿಯನ್ನು ವಿಚಾರಣೆ ನಡೆಸಬಾರದು ಎಂದು ರಾಜೇಗೌಡರು ನ್ಯಾಯಾಲಯದ ಮೊರೆ ಹೋದರೂ ಅದಕ್ಕೆ ಹಿನ್ನಡೆಯಾಯಿತು. ಬಳಿಕ ರಾಜೇಗೌಡರು ಹೈಕೋರ್ಟ್‌ನ ತೀರ್ಪಿನ ವಿರುದ್ಧ ಸುಪ್ರೀಂಕೋರ್ಟ್ ಮೆಟ್ಟಿಲೇರಿದರು. ಸುಪ್ರೀಂಕೋರ್ಟ್ ವಿಚಾರಣೆ ನಡೆಸಲು ಅನುಮತಿ ನೀಡಿರುವುದರಿಂದ ಜೀವರಾಜ್ ಮೊದಲ ಹಂತದಲ್ಲಿ ವಿಜಯಿಯಾದರು. ವಿಚಾರಣೆಯ ಬಳಿಕ ಹೈಕೋರ್ಟ್ ಮರು ಎಣಿಕೆಗೆ ಆದೇಶ ನೀಡಿದಾಗ ಅದನ್ನೂ ರಾಜೇಗೌಡರು ಸುಪ್ರೀಂಕೋರ್ಟ್‌ನಲ್ಲಿ ಪ್ರಶ್ನಿಸಿದರು. ಹೈಕೋರ್ಟ್ ಆದೇಶವನ್ನು ಸುಪ್ರೀಂಕೋರ್ಟ್ ಎತ್ತಿ ಹಿಡಿದಿರುವುದರಿಂದ ಮರು ಎಣಿಕೆ ಅನಿವಾರ್ಯವಾಯಿತು.ಮರು ಎಣಿಕೆಯಲ್ಲಿ ರಾಜೇಗೌಡರಿಗೆ ಸಿಕ್ಕಿದ ಮತಗಳಲ್ಲಿ 255 ಮತಗಳು ತಿರಸ್ಕೃತವಾದವು. ಪರಿಣಾಮವಾಗಿ 52 ಮತಗಳ ಅಂತರದಿಂದ ಸೋಲುಣ್ಣಬೇಕಾಯಿತು. ಆದರೆ ಈ ಸೋಲನ್ನು ಒಪ್ಪುವುದಕ್ಕೆ ಕಾಂಗ್ರೆಸ್ ಅಭ್ಯರ್ಥಿ ಸಿದ್ಧರಿಲ್ಲ. ಈಗಾಗಲೇ ಮತಗಳನ್ನು ತಿರುಚಿದ ಬಗ್ಗೆ ಜೀವರಾಜ್ ವಿರುದ್ಧ ರಾಜೇಗೌಡರು ದೂರನ್ನು ದಾಖಲಿಸಿದ್ದಾರೆ.

ಇಲ್ಲಿ ಇಬ್ಬರು ಹಾಲಿ-ಮಾಜಿಗಳು ಅನುಮಾನಾಸ್ಪದರೇ ಆಗಿದ್ದಾರೆ. ಕಾಂಗ್ರೆಸ್ ಶೃಂಗೇರಿಯ ವಿದ್ಯಮಾನವನ್ನು ಪ್ರಜಾಪ್ರಭುತ್ವಕ್ಕೆ ಕಳಂಕ ಎಂದು ಕರೆದಿದೆ. ಇದೊಂದು ಕ್ರಿಮಿನಲ್ ಪ್ರಕರಣ ಎಂದು ಆರೋಪಿಸಿದೆ. ಮರು ಎಣಿಕೆಗೂ ಮುನ್ನ ಸ್ಟ್ರಾಂಗ್ ರೂಂ ಬೀಗ ತೆರೆದಾಗ 20 ಬಾಕ್ಸ್ ಗಳಲ್ಲಿ ಒಂಭತ್ತು ಬಾಕ್ಸ್ ಗಳ ಮೊಹರು ಒಡೆದಿತ್ತು. ಈ ಬಗ್ಗೆ ಸಂಬಂಧಪಟ್ಟವರಿಗೆ ದೂರು ನೀಡಿದರೂ, ಅದನ್ನು ಗಮನಕ್ಕೆ ತೆಗೆದುಕೊಳ್ಳದೆ ಮರುಎಣಿಕೆ ಮಾಡಲಾಗಿದೆ ಎಂದು ಕಾಂಗ್ರೆಸ್ ಆರೋಪಿಸುತ್ತಿದೆ. ಈ ಆರೋಪದಲ್ಲಿ ಸತ್ಯಾಂಶವಿದೆ ಎಂದಾದರೆ ನಿಜಕ್ಕೂ ಗಂಭೀರ ವಿಷಯ. ಇಷ್ಟಕ್ಕೂ ಬಿಜೆಪಿ, ಕಾಂಗ್ರೆಸ್, ಜೆಡಿಎಸ್ ಪಕ್ಷದ ಏಜೆಂಟರ್‌ಗಳ ಸಮ್ಮುಖದಲ್ಲಿ 2023ರಲ್ಲಿ ಮತಎಣಿಕೆ ನಡೆದಿದೆ ಮಾತ್ರವಲ್ಲ, ಮೂರೂ ಪಕ್ಷದ ಏಜೆಂಟರುಗಳೂ ಅದನ್ನು ಮಾನ್ಯ ಮಾಡಿದ್ದಾರೆ. ಇಷ್ಟಾದ ಮೇಲೂ ಮತ ಎಣಿಕೆಯಲ್ಲಿ ದೋಷವಿದೆ ಎಂದು ಆರೋಪ ಮಾಡಲು ಕಾರಣವೇನು? ಎನ್ನುವುದು ಒಂದು ಪ್ರಶ್ನೆ. ಆರಂಭದಲ್ಲಿ ಬಿಜೆಪಿಗೆ ಆಕ್ಷೇಪವಿದ್ದದ್ದು, ತಿರಸ್ಕೃತಗೊಂಡಿರುವ 299 ಮತಗಳ ಕುರಿತಂತೆ. ಆದರೆ ಈ ಬಾರಿ ಮರು ಮತಎಣಿಕೆಯಲ್ಲಿ ರಾಜೇಗೌಡರ ಪಾಲಿಗೆ ಸಿಕ್ಕಿದ ಮತಗಳು ತಿರಸ್ಕೃತಗೊಂಡಿವೆ. ಇದು ಅನುಮಾನಕ್ಕೆ ಕಾರಣವಾಗಿದೆ. ಇಲ್ಲಿ ತಿರಸ್ಕೃತಗೊಂಡ ಮತಗಳು ಒಂದು ಅಥವಾ ಎರಡಲ್ಲ, 255 ಮತಗಳು ತಿರಸ್ಕೃತಗೊಂಡಿವೆ. ಇಷ್ಟೊಂದು ಮತಗಳು ತಿರಸ್ಕೃತಗೊಂಡಿರುವುದು ಈ ಹಿಂದೆ ಚುನಾವಣಾಧಿಕಾರಿಗಳ ಗಮನಕ್ಕೆ ಯಾಕೆ ಬಂದಿರಲಿಲ್ಲ? ಅದು ಬರೇ ಆಕಸ್ಮಿಕವೆ? ಆದುದರಿಂದ ಎಲ್ಲ ಗೊಂದಲಗಳಿಗೂ ಮತ ಎಣಿಕೆಯ ಸಂದರ್ಭದಲ್ಲಿ ಉಪಸ್ಥಿತರಿದ್ದ ಚುನಾವಣಾಧಿಕಾರಿಯನ್ನು ಹೊಣೆ ಮಾಡಬೇಕಾಗಿದೆ.

ನಾಯಕನಿಗಾಗಿ ಕಾದ ತಮಿಳುನಾಡು... ವಿಜಯ್ ಆಯ್ಕೆ ಮಾಡಿಕೊಂಡಿರಬಹುದೇ?

ಅದು 2004. ನಾನು ಎಂಎ ವ್ಯಾಸಂಗ ಮುಗಿಸಿ ಒಂದು ಶಾಲೆಯಲ್ಲಿ ಕೆಲಸ ಮಾಡುತ್ತಿದ್ದೆ. ಹುಟ್ಟುತರಲೆ ಹುಡುಗರ, ಹೆಚ್ಚು ತಮಿಳರೇ ಓದುತ್ತಿದ್ದ ಶಾಲೆಯದು. ಅಸಾಧಾರಣ ಎನರ್ಜಿ, ಅಪರಿಮಿತ ಜೋಷ್, ಕೊನೆಯಿಲ್ಲದ ಕೀಟಲೆಗಳ ನಡುವೆ ನಾ ಅವರಿಗೆ ಬೋಧಿಸಬೇಕಿತ್ತು. ದಂಡ ಹಿಡಿದು, ಗದರಿಸಿ, ಬೆದರಿಸಿ ಹತೋಟಿಯಲ್ಲಿಡುವ ತಂತ್ರ ಯಶಸ್ವಿಯಾಗುವುದಿಲ್ಲವೆಂದು ನನಗೆ ಅರಿವಾಗಿತ್ತು. ನಾ ತರಗತಿಗೆ ಎಂಟ್ರಿ ಕೊಡುತ್ತಿದ್ದಂತೆ ಸೀಟಿ ಕೇಳಿಸುತ್ತಿತ್ತು, ತಮಿಳಿನಲ್ಲಿ ಏನೋ ನನಗೆ ಅರ್ಥವಾಗದ ಕಾಮೆಂಟ್ ಗಳು ಬೇರೆ. ಆದರೆ ಕೋಪಗೊಳ್ಳದೆ ಅವರೊಡನೆ ಸ್ನೇಹ ಬೆಳೆಸಿಕೊಂಡೆ. ಬೋಧನೆಗೆ ಅತ್ಯಗತ್ಯವಾಗಬೇಕಾದ ಸಂಯಮ, ಮಾನವೀಯತೆ, ಸಹಾನುಭೂತಿಯ- ನಾನು ಎಲ್ಲಾ ತಿಳಿದಿರುವ ಪರಮ ಜ್ಞಾನಿಯಲ್ಲ, ನಾನು ಕೂಡ ಹಲವು ವಿಷಯಗಳಲ್ಲಿ ಅಜ್ಞಾನಿಯೂ ಹೌದು ಮತ್ತು ದುರ್ಬಲನೂ ಹೌದು. ಬನ್ನಿ ಒಟ್ಟಿಗೆ ಕಲಿಕೆಯಲ್ಲಿ ತೊಡಗುವ ಎಂಬ ಗುಣ ಕಲಿತ ದಿನಗಳವು. ಬೆಲ್ ಹುಕ್ಸ್ ಬರೆದ ''ಟೀಚಿಂಗ್ ಟು ಟ್ರಾನ್ಸ್ ಗ್ರೆಸ್'' ಕೃತಿಯಲ್ಲಿನ ಯಲ್ಲಿ ಗೊತ್ತಿಲ್ಲದೆ ತೊಡಗಿಕೊಂಡ ದಿನಗಳವು. ವಿದ್ಯಾರ್ಥಿಗಳಿಗೆ ಹೇಳಿಕೊಡುತ್ತಾ ಅವರಿಂದ ಕಲಿತು ಬೆಳೆದ ದಿನಗಳವು. ಆ ಶಾಲೆ ತೊರೆದು ಕಾಲೇಜಿನಲ್ಲಿ ಬೋಧಿಸಲು ಹೊರಟಾಗ ಎದೆ ಭಾರವಾಗಿತ್ತು. ಅನೌಪಚಾರಿಕ ಬೀಳ್ಕೊಡುಗೆ ಭೇಟಿಯಲ್ಲಿ ಮಕ್ಕಳು ''ಅಪ್ಪಾಡಿ ಪೋಡು ಪೋಡು '' ಎಂಬ ಪೆಪ್ಪಿ ಹಾಡಿಗೆ ನನ್ನ ಕೂಡ ಕುಣಿಸಿದ್ದರು. ನಂತರ ತಿಳಿದದ್ದು ಆ ಹಾಡು ತಿಮಿಳಿನ ಸೂಪರ್ ಸ್ಟಾರ್ ವಿಜಯ್ ''ಗಿಲ್ಲಿ'' ಚಿತ್ರದ್ದು ಎಂದು.

ಅಂದಿಂದ ಇಂದಿನವರೆಗೆ ವಿಜಯ್ ಅವರನ್ನು ಗಮನಿಸುತ್ತಲೇ ಬಂದಿದ್ದೇನೆ. ಆಕ್ಷನ್ ಭರಿತ ರೋಮ್ಯಾನ್ಸ್, ಫ್ಯಾಮಿಲಿ ಡ್ರಾಮಾ, ಸಹೋದರ ಕರ್ತವ್ಯ, ಮೆಡಿಕಲ್-ಫಾರ್ಮಸಿ ಮಾಫಿಯಾ, ಶಿಕ್ಷಣದ ವ್ಯಾಪಾರೀಕರಣ, ಮಹಿಳಾ ಸಬಲೀಕರಣ, ಕಾರ್ಪೊರೇಟ್ ಶೋಷಣೆ, ನಾಯಕತ್ವ, ಪ್ರಜಾಪ್ರಭುತ್ವ, ಬಾಲಪರಾಧಿಗಳ ವಿಮೋಚನೆ -ಹೀಗೆ ಹಲವು ವಿಷಯಾಧಾರಿತ ಚಿತ್ರಗಳಲ್ಲಿ ನಟಿಸಿದ ವಿಜಯ್, ಒಂದು ಪೂರ್ವನಿರ್ಧಾರಿತ ಗುರಿಯಿಟ್ಟುಕೊಂಡು ಸಿನಿಮಾ ಆಯ್ಕೆ ಮಾಡಿಕೊಳ್ಳುತ್ತಿದ್ದರು ಎಂಬುದರಲ್ಲಿ ಯಾವುದೇ ಅನುಮಾನವಿರಲಿಲ್ಲ. ಪಕ್ಕ ಮಾಸ್ ಡೈಲಾಗ್, ನ್ಯಾಯದ ಪರವಾಗಿ ನಿಲ್ಲುವ, ಯುವ ಜನತೆಗೆ ಅಪೀಲಿಂಗ್ ಆಗಿರುವ ''ಬ್ಯಾಡ್ ಆಸ್ ಗಯ್'' ವಿಜಯ್ ತಮಿಳುನಾಡಿನ ಮುಖ್ಯಮಂತ್ರಿಯಾಗಿದ್ದು ನನಗಂತೂ ಅಚ್ಚರಿ ತಂದಿಲ್ಲ.

ವಿಜಯ್ ಈ ಗೆಲುವಿಗೆ ಸಿದ್ಧತೆ ಶುರು ಮಾಡಿದ್ದು 2009. ಆ ವರುಷ ವಿಜಯ್ ''ವಿಜಯ್ ಮಕ್ಕಳ್ ಇಯಕ್ಕಂ'' ಎಂಬ ಅಭಿಮಾನಿಗಳ ಸಂಘಟನೆ ಆರಂಭಿಸಿದರು. ಮಿಂಚಿನ ವೇಗದಲ್ಲಿ ಈ ಸಂಘಟನೆ ಹಿಗ್ಗಿ ಸಾಮಾಜಿಕ ಕೆಲಸಗಳಲ್ಲಿ ತೊಡಗಿಸಿಕೊಂಡಿತು. ಬಡವರಿಗೆ ಉಚಿತ ಊಟ ಒದಗಿಸುವ ಕ್ಯಾಂಟೀನ್, ವಿದ್ಯಾರ್ಥಿಗಳಿಗೆ ಉಚಿತ ಲ್ಯಾಪ್ಟಾಪ್ ವಿತರಣೆ, ರಕ್ತದಾನ



ಶಿಬಿರಗಳ ಆಯೋಜನೆ ಕಾರ್ಯಗಳಲ್ಲಿ ತೊಡಗಿದ ಸಂಘಟನೆಗೆ ಮತ್ತಷ್ಟು ಹುರುಪು ಹಣ ಬೆಂಬಲ ನೀಡಿದ ವಿಜಯ್ ಅವರನ್ನು ಪ್ರವಾಹ, ಚಂಡಮಾರುತ ವಿಪತ್ತು ಪರಿಹಾರ ಕಾರ್ಯಗಳಲ್ಲೂ ತೊಡಗಿಕೊಳ್ಳುವಂತೆ ಪ್ರೇರೇಪಿಸಿದರು. ಹೀಗೆ ಸಾಮಾಜಿಕ ಕಾರ್ಯಗಳಲ್ಲಿ ತೊಡಗಿಸಿಕೊಂಡ ವಿಜಯ್ ಅಭಿಮಾನಿಗಳು ಪ್ರಾದೇಶಿಕ/ಸ್ಥಳೀಯ ಚುನಾವಣೆಗಳಲ್ಲಿ ಗೆದ್ದದ್ದೂ ಇದೆ. ತಮಿಳು ನೆಲದ ಸಾಂಪ್ರದಾಯಿಕ ಜಲ್ಲಿಕಟ್ಟು ಆಚರಣೆಯನ್ನು ಬ್ಯಾನ್ ಮಾಡಲು ಉಚ್ಚನ್ಯಾಯಾಲಯ ಮುಂದಾದಾಗ ವಿಜಯ್ ತಮಿಳರ ಬೆಂಬಲಕ್ಕೆ ನಿಂತರು. ಅಸ್ತಿತ್ವದಲ್ಲಿರುವ ಅಧಿಕಾರ ವಿರೋಧಿ ನಿಲುವಿನ ವಿಜಯ್ ಮಾಸ್ಕ್ ತೊಟ್ಟು ಪ್ರತಿಭಟನಾಕಾರರ ನಡುವೆ ಕಾಣಿಸಿಕೊಂಡದ್ದು ಇದೆ. ತಮಿಳುನಾಡಿನ ಹನ್ನೆರಡನೇ ತರಗತಿಯಲ್ಲಿ ಟಾಪರ್ ಆದರೂ ನೀಟ್ ಪರೀಕ್ಷೆಯಲ್ಲಿ ''ಅರ್ಹತೆ'' ಗಳಿಸದೆ ಆತ್ಮಹತ್ಯೆ ಮಾಡಿಕೊಂಡ ವಿದ್ಯಾರ್ಥಿನಿ ಎಸ್ ಅನಿತಾರ ಪೋಷಕರನ್ನು ಭೇಟಿ ಮಾಡಿ ಸಾಂತ್ವನ ಹೇಳಿದರು. ಅಂದಿನಿಂದ ನೀಟ್ ಪರೀಕ್ಷೆಯ ವಿರುದ್ಧ ನಿಲುವಿಗೆ ಬದ್ಧ ಎಂದು ಸಾರಿದರು. ತೂತುಕುಡಿಯ ವಾತಾವರಣವನ್ನು ವಿಷಮಗೊಳಿಸುತ್ತಿದ್ದ ವೇದಾಂತ ಸ್ಟೆರಲೈಟ್ ಕಾಪರ್ ಘಟಕದ ವಿರುದ್ಧ ಪ್ರತಿಭಟನೆಗಿಳಿದ ಜನರ ಮೇಲೆ ಪೊಲೀಸರು ಗುಂಡು ಹಾರಿಸಿದರು. ಹದಿಮೂರು ಮಂದಿ ಪ್ರಾಣ ಬಿಟ್ಟರು. ವಿಜಯ್ ತೂತುಕುಡಿಯ ಸಂತ್ರಸ್ತರನ್ನು ಸಂತೈಸಿದರು. ಫೆ. 2, 2024ರಂದು ಟಿವಿಕೆ ಪಾರ್ಟಿ ಘೋಷಿಸಿದ ವಿಜಯ್ ಅವರಿಗೆ ಕರೂರ್ ಕಾಲ್ತುಳಿತ ದುರಂತದ ಕಳಂಕ ಅಂಟಿಕೊಂಡರೂ, ಕಾಲ್ತುಳಿತಕ್ಕೆ ಬಲಿಯಾದ 41 ಮಂದಿಯ ಕುಟುಂಬಸ್ಥರನ್ನು ಚೆನ್ನೈಗೆ ಕರೆಸಿ ಸಮಾಧಾನ ಮಾಡುವಲ್ಲಿ ಯಶಸ್ವಿಯಾದರು. ಕರೂರ್ ಕಾಲ್ತುಳಿತಕ್ಕೆ ಆಡಳಿತಾರೂಢ ಡಿಎಂಕೆ ನೇರ ಹೊಣೆಯೆಂದು ಬಿಂಬಿಸುವಲ್ಲಿ ವಿಜಯ್ ಗೆದ್ದರು. ಕಳೆದ ಹದಿನೈದು ವರುಷಗಳಲ್ಲಿ ವಿಜಯ್ ರಾಹುಲ್ ಗಾಂಧಿ, ಗುಜರಾತ್ ಮುಖ್ಯಮಂತ್ರಿ ದಿನಗಳಲ್ಲಿ ನರೇಂದ್ರ ಮೋದಿಯವರನ್ನು, ಲೋಕಪಾಲ್ ಬಿಲ್ ಹೋರಾಟದ ರೂವಾರಿ ಅಣ್ಣಾ ಹಜಾರೆಯವರನ್ನು ಭೇಟಿಯಾಗಿದ್ದು ಎಂಬುದನ್ನು ಖಾತರಿಪಡಿಸುತ್ತದೆ.

ಬಹುಪಾಲು ವಿಜಯ್ ಅಭಿಯಾನ ನಡೆದದ್ದು , ಟ್ವಿಟರ್ ಮತ್ತು ಯುಟ್ಯೂಬ್ ನಲ್ಲಿ. ವಿಜಯ್ ಸಭೆಗಳಲ್ಲಿ ಅತಿಯಾಗಿ ಕಾಣಿಸಿಕೊಳ್ಳಲಿಲ್ಲ. ಕೆಲವು ಕಡೆ ಪ್ರಚಾರಕ್ಕೆ ತದ್ರೂಪಿಯನ್ನು (ಬಾಡಿ ಡಬಲ್) ಬಳಸಿಕೊಂಡಿದ್ದು ಇದೆ. ಆಗಾಗ ಕಾಣಿಸಿಕೊಂಡು ಒಂದು ಎಂಬಂತೆ ವಿಜಯ್ ತಮ್ಮನ್ನ ತಾವು ಬಿಂಬಿಸಿಕೊಂಡರು. ಚಿತ್ರರಂಗವನ್ನು ಸಂಪೂರ್ಣವಾಗಿ ತೊರೆದು ಜನಸೇವೆಗೆ ಧುಮುಕಿದ್ದೇನೆ ಎಂದು ಸಾರಿದರು. ವಿಜಯ್ ತೊಟ್ಟ ಬಿಳಿ ಅಂಗಿ, ಖಾಕಿ ಪ್ಯಾಂಟು ಅವರ ಅಭಿಮಾನಿ ಮತ್ತು ಪ್ರಚಾರಕರ ಸಮವಸ್ತ್ರವಾಯಿತು. ಹಲವು ಕಡೆ ಪ್ರಚಾರ ಪರದೆಗಳನ್ನು (ಹಾಲೋಗ್ರಾಮ್) ಉಪಯೋಗಿಸಿ ಜನರನ್ನು ತಲುಪಿದರು. ಟಿವಿಕೆ ಪಾರ್ಟಿಯ ಚಿಹ್ನೆಯಾದ ಸೀಟಿ () ಅನ್ನು ಯುವಕರು ತಮ್ಮ ತಂದೆ, ತಾಯಿ, ಸಂಬಂಧಿಗಳ ಕಿವಿಯಲ್ಲಿ ಊದುವಂತೆ ಕರೆಕೊಟ್ಟರು. ಈ ಬಾರಿ ತಮಿಳುನಾಡಿನಲ್ಲಿ ಹೊಸದಾಗಿ ಸೇರ್ಪಡೆಯಾದ ಮತದಾರರು ಶೇಕಡಾ 12.5ರಷ್ಟು ಅಂದರೆ ಸುಮಾರು 1.2 ಕೋಟಿಯಷ್ಟು ಮಂದಿ, ಇವರೆಲ್ಲಾ ಯುವಕರು ಎಂದರೆ ಸರಿ ಹೋದಿತು. ಟಿವಿಕೆಗೆ ಇದು ಕೂಡ ವರದಾನವಾಯಿತು.

ವಿಜಯ್ ತಮಿಳರ ನಾಡಿಮಿಡಿತ ಅರಿತವರು. ವೇದಿಕೆ ಮೇಲೆ ಅವರು ಭಾಷಣ ಮಾಡುವಾಗ ಅವರ ಹಿಂದೆ ಪೆರಿಯಾರ್, ಕಾಮರಾಜು, ಬಾಬಾ ಸಾಹೇಬ್ ಅಂಬೇಡ್ಕರ್, ವೇಲು ನಾಚ್ಚಿಯಾರ್, ಅಂಜಲೈ ಅಮ್ಮಾಲ್ ಚಿತ್ರಗಳು ರಾರಾಜಿಸುತ್ತಿರುತ್ತವೆ. ''ಹುಟ್ಟುವಾಗ ನಾವೆಲ್ಲರೂ ಸಮಾನರು'' ಎಂಬ ತಿರುಕ್ಕುರಳ್ ವಾಕ್ಯ ಇವರ ರಾಜಕೀಯ ಸಿದ್ಧಾಂತದ ಮೂಲ. ಅವರ ಇಷ್ಟು ವರುಷದ ತಯಾರಿ, ಪೊಸಿಷನಿಂಗ್, ಸೋಶಿಯಲ್ ವರ್ಕ್ ಎಲ್ಲವೂ ಫಲ ನೀಡಿದೆ. ಅದು ಬಂಪರ್ ಫಲ. ಬೇಸಾಯ ಶುರು ಮಾಡಿದ ರೈತನಿಗೆ ಮೊದಲ ಬೆಳೆ ಬಂಪರ್ ಬೆಳೆಯಾಗುವುದು ಬಹಳ ವಿರಳ, ಆದರೆ ಅಂತಹದೊಂದು ಅನಿರೀಕ್ಷಿತ ಬೆಳೆ ವಿಜಯ್ ಕೈ ಹಿಡಿದಿದೆ. ಮೇಲ್ನೋಟಕ್ಕೆ ಕಣಜ ತುಂಬಿದಂತೆ ಕಾಣುತ್ತಿದೆ. ಕಣಜ ಇನ್ನೈದು ವರ್ಷ ತಮಿಳುನಾಡಿನ ಜನರನ್ನು ಸಲಹುತ್ತದೆ ಎಂಬ ನಂಬಿಕೆ ಎಲ್ಲರಲ್ಲಿದೆ.

ವಿಜಯ್- ತಮಿಳುನಾಡಿನ ಮುಖ್ಯಮಂತ್ರಿ:2021ರಲ್ಲಿ ತೆರೆಕಂಡ ಮಾಸ್ಟರ ಚಿತ್ರದಲ್ಲಿ, ವಿಜಯ್ (ಜೆಡಿ) ಒಬ್ಬ ಶಿಕ್ಷಕ. ವಿದ್ಯಾರ್ಥಿಗಳಿಗೆ ಅಚ್ಚುಮೆಚ್ಚು. ಆದರೆ ಸದಾ ಕುಡಿತದ ಅಮಲಿನಲ್ಲೇ ಇರುವವ ಅವ. ಮುಂದುವರೆದು ಭವಾನಿ ಎಂಬ ಬಾಲಾಪರಾಧಿ, ವಿಕೃತ ಡ್ರಗ್ ಲಾರ್ಡ್ ಮತ್ತು ರಕ್ತದಾಯಿ ರಕ್ಕಸನನ್ನು ಎದಿರುಹಾಕಿಕೊಂಡು ಕುಡಿತ, ನಶೆ ತ್ಯಜಿಸಿ ತನ್ನ ಸರ್ವವನ್ನು ಪಣಕ್ಕಿಟ್ಟು ಬಾಲಾಪರಾಧಿಗಳ ಒಳಿತಿಗಾಗಿ ಶ್ರಮಿಸುವ ನಾಯಕನ ಕಥೆಯದು. ತೀರಾ ಆದ ಶಿಕ್ಷಕನ ಪಾತ್ರವದು. ತನ್ನೆಲ್ಲಾ , ವ್ಯಸನಗಳ ಹೊರತಾಗಿಯೂ ಆತ ಯಶಸ್ವಿ ಶಿಕ್ಷಕನಾಗಿ, ನಿಜವಾದ ಮಾಸ್ಟರಾಗಿ ವ್ಯವಸ್ಥೆಯನ್ನು ತಿದ್ದುತ್ತಾನೆ. ಅಂತಹದೇ ನಾಯಕನಿಗಾಗಿ ತಮಿಳುನಾಡಿನ ಜನರು ಕಾಯುತ್ತಿರಬಹುದು. ಅವರಿಗೆ ಪರ್ಫೆಕ್ಟ್ ಆದ, ನಿಷ್ಕಳಂಕನೆಂದು ಬಿಂಬಿಸಿಕೊಳ್ಳುವ, ಸರ್ವಶಕ್ತ ಲೋಕ ಗುರು ಬೇಕಿಲ್ಲ. ವಿಜಯ್ ಅವರಿರಬಹುದೇ? ಕಾದು ನೋಡುವ

ಕಾಲಿವುಡ್ ಸೂಪರ್‌ಸ್ಟಾರ್‌ನಿಂದ ತಮಿಳುನಾಡು ಮುಖ್ಯಮಂತ್ರಿಯವರೆಗೆ: ಸಿಎಂ ವಿಜಯ್ ರಾಜಕೀಯ ಪಯಣ

ಚೆನ್ನೈ(ತಮಿಳುನಾಡು): ಕಳೆದ ಮೂರು ತಿಂಗಳುಗಳಿಂದ ತಮಿಳುನಾಡಿನಾದ್ಯಂತ ಕೇವಲ ಮೂರು ಅಕ್ಷರಗಳ ಹೆಸರೇ ಪ್ರತಿಧ್ವನಿಸುತ್ತಿದೆ. ಅದೇ ವಿಜಯ್. ತಮಿಳು ಚಿತ್ರರಂಗದ ಅತಿದೊಡ್ಡ ಸೂಪರ್‌ಸ್ಟಾರ್‌ಗಳಲ್ಲಿ ಒಬ್ಬರಾಗಿ ತಮಿಳುನಾಡು ರಾಜಕೀಯದಲ್ಲಿ ಪ್ರಬಲ ಶಕ್ತಿಯಾಗಿ ಹೊರಹೊಮ್ಮುವವರೆಗೆ, ವಿಜಯ್ ಅವರ ಜೀವನ ಹಲವಾರು ತಿರುವುಗಳನ್ನು ಕಂಡಿದೆ.

ಜೂನ್ 22, 1974 ರಂದು ವಿಜಯ್ ಚಲನಚಿತ್ರ ನಿರ್ಮಾಪಕ ಎಸ್. ಎ. ಚಂದ್ರಶೇಖರ್ ಮತ್ತು ಹಿನ್ನೆಲೆ ಗಾಯಕಿ ಶೋಭಾ ಚಂದ್ರಶೇಖರ್ ದಂಪತಿಯ ಮಗನಾಗಿ ಜನಿಸಿದರು. ಅವರ ತಂದೆ ಆರಂಭದಲ್ಲಿ ನಿರ್ದೇಶಕರಾಗುವ ಮೊದಲು ಚಲನಚಿತ್ರೋದ್ಯಮದಲ್ಲಿ ಕೆಲಸ ಮಾಡುತ್ತಿದ್ದರು. ಆದರೆ ಅವರ ತಾಯಿ ಗಾಯಕಿಯಾಗಿದ್ದರು.

ವಿಜಯ್‌ಗೆ ವಿದ್ಯಾ ಎಂಬ ತಂಗಿ ಇದ್ದರು, ಅವರು ಎರಡು ವರ್ಷ ವಯಸ್ಸಿನಲ್ಲಿ ಅನಾರೋಗ್ಯದಿಂದ ನಿಧನರಾದರು. ಅವರ ಸಾವು ಅವರನ್ನು ತೀವ್ರವಾಗಿ ಬಾಧಿಸಿತು. ದುರಂತದ ಮೊದಲು ಉತ್ಸಾಹಭರಿತ ಮತ್ತು ಮಾತನಾಡುವ ಮಗು ಎಂದು ಕರೆಯಲ್ಪಡುತ್ತಿದ್ದ ವಿಜಯ್ ನಂತರ ಶಾಂತ ಮತ್ತು ಸಂಯಮದಿಂದ ಕೂಡಿದ ಗುಣದವನಾಗಿ ಬದಲಾದ - ಇದು ಇಂದಿಗೂ ಮುಂದುವರೆದಿದೆ.

ಅವರು ಚೆನ್ನೈನ ಲೊಯೊಲಾ ಕಾಲೇಜಿನಲ್ಲಿ ಬಿ.ಎಸ್ಸಿ . ದೃಶ್ಯ ಸಂವಹನವನ್ನು ಅಧ್ಯಯನ ಮಾಡಿದರು. ಆದರೆ ನಟನೆಯ ಮೇಲಿನ ಉತ್ಸಾಹದಿಂದಾಗಿ ತಮ್ಮ ಅಧ್ಯಯನವನ್ನು ಮಧ್ಯದಲ್ಲಿಯೇ ನಿಲ್ಲಿಸಿದರು.

ಸಿನಿಮಾ ಪ್ರವೇಶ: ತಮ್ಮ ತಂದೆ ಈಗಾಗಲೇ ಚಲನಚಿತ್ರೋದ್ಯಮದಲ್ಲಿ ನೆಲೆಗೊಂಡಿದ್ದ ಸಂದರ್ಭ ವಿಜಯ್ ತಮ್ಮ 10 ನೇ ವಯಸ್ಸಿನಲ್ಲಿ ವೆಟ್ರಿ (1984) ಚಿತ್ರದಲ್ಲಿ ಬಾಲ ಕಲಾವಿದನಾಗಿ ಪಾದಾರ್ಪಣೆ ಮಾಡಿದರು. ನಂತರ ಅವರು ಎಸ್.ಎ. ಚಂದ್ರಶೇಖರ್ ನಿರ್ದೇಶನದ ಹಲವಾರು ಚಿತ್ರಗಳಲ್ಲಿ ಬಾಲ ನಟನಾಗಿ ಕಾಣಿಸಿಕೊಂಡರು.

ಸ್ವಲ್ಪ ಸಮಯದ ವಿರಾಮದ ನಂತರ, ವಿಜಯ್ ಅವರನ್ನು ತಮ್ಮ ತಂದೆಯ ನಲೈಯ ತೀರ್ಪು (1992) ಚಿತ್ರದ ಮೂಲಕ ನಾಯಕ ನಟನಾಗಿ ಪರಿಚಯಿಸಲಾಯಿತು. ನಂತರ ಅವರು ಹಲವಾರು ಚಿತ್ರಗಳಲ್ಲಿ ನಟಿಸಿದರೂ, ಅವರ ವೃತ್ತಿಜೀವನದ ಪ್ರಮುಖ ತಿರುವು 1996 ರಲ್ಲಿ ವಿಕ್ರಮನ್ ಅವರ ಪೂವೆ ಉನಕ್ಕಗ ಚಿತ್ರದೊಂದಿಗೆ ಪಡೆಯಿತು. ಈ ಚಿತ್ರವು ವಿಜಯ್ ಅವರನ್ನು ಪ್ರಣಯ ನಾಯಕನನ್ನಾಗಿ ಪರಿವರ್ತಿಸಿತು. ಅದರ ನಂತರ ಅವರು ಕಾದಲುಕ್ಕು ಮರಿಯಧೈ, ತುಳ್ಳದ ಮನಮುಮ್ ತುಳ್ಳಮ್, ಕುಶಿ ಮತ್ತು ಫ್ರೆಂಡ್ಸ್ ನಂತಹ ಯಶಸ್ವಿ ಚಿತ್ರಗಳಲ್ಲಿ ನಟಿಸಿದರು.

ಮಾಸ್ ಹೀರೋ ಆಗಿ ಬೆಳವಣಿಗೆ: ಪ್ರಣಯ ನಾಯಕನಾಗಿ ಪ್ರೇಕ್ಷಕರನ್ನು ಆಕರ್ಷಿಸಿದ ನಂತರ, ವಿಜಯ್ 2003ರಲ್ಲಿ ಆಕ್ಷನ್ ತಾರೆಯಾಗಿ ತಮ್ಮನ್ನು ತಾವು ಮರುಶೋಧಿಸಿಕೊಂಡರು. ತಿರುಮಲೈನಿಂದ ಪ್ರಾರಂಭಿಸಿ, ನಂತರ ಗಿಲ್ಲಿ ಮತ್ತು ತಿರುಪಾಚಿಯಂತಹ ಬ್ಲಾಕ್‌ಬಸ್ಟರ್‌ಗಳ ಮೂಲಕ, ಅವರು ಮಾಸ್ ಹೀರೋ ಸ್ಥಾನಮಾನಕ್ಕೆ ಏರಿದರು. ಅಲ್ಲಿಂದ ಮುಂದೆ, ತುಪ್ಪಕ್ಕಿ, ಕತ್ತಿ, ಮೆರ್ಸಲ್ ಮತ್ತು ಲಿಯೋ ಮುಂತಾದ ಚಿತ್ರಗಳು ತಮಿಳು ಚಿತ್ರರಂಗದ ಅತಿದೊಡ್ಡ ಬಾಕ್ಸ್ ಆಫೀಸ್ ತಾರೆಗಳಲ್ಲಿ ಒಬ್ಬರಾಗಿ ಅವರ ಸ್ಥಾನವನ್ನು ಭದ್ರಪಡಿಸಿದವು.



ಸಮಾಜ ಸೇವೆ ಮತ್ತು ರಾಜಕೀಯ ಪ್ರವೇಶ: ತಮ್ಮ ಚಲನಚಿತ್ರ ವೃತ್ತಿಜೀವನದ ಉತ್ತುಂಗದಲ್ಲಿದ್ದಾಗಲೂ, ವಿಜಯ್ ತಮ್ಮ ಅಭಿಮಾನಿ ಸಂಘಟನೆಯಾದ ವಿಜಯ್ ಮಕ್ಕಳ್ ಇಯಕ್ಕಂ ಮೂಲಕ ಸಾಮಾಜಿಕ ಸೇವೆಯಲ್ಲಿ ಸಕ್ರಿಯರಾಗಿದ್ದರು. ಹಲವಾರು ವರ್ಷಗಳ ಕಾಲ, ಸಂಸ್ಥೆಯು ತಮಿಳುನಾಡಿನಾದ್ಯಂತ ಕಲ್ಯಾಣ ಚಟುವಟಿಕೆಗಳನ್ನು ನಡೆಸಿತು. ಕಳೆದ ಮೂರು ವರ್ಷಗಳಲ್ಲಿ, ವಿಜಯ್ ವೈಯಕ್ತಿಕವಾಗಿ ವಿವಿಧ ಕ್ಷೇತ್ರಗಳಿಂದ 10 ಮತ್ತು 12ನೇ ತರಗತಿಯ ರಾಜ್ಯ ಟಾಪರ್‌ಗಳನ್ನು ಸನ್ಮಾನಿಸಿದರು, ಅವರನ್ನು ಸಾರ್ವಜನಿಕವಾಗಿ ಆಹ್ವಾನಿಸಿದರು ಮತ್ತು ಗುರುತಿಸಿದರು.

ತಮ್ಮ ಸಾಮಾಜಿಕ ಸಂಪರ್ಕದ ಮುಂದುವರಿಕೆಯಾಗಿ, ವಿಜಯ್ ಫೆಬ್ರವರಿ 2, 2024 ರಂದು ತಮ್ಮ ರಾಜಕೀಯ ಪಕ್ಷವಾದ ತಮಿಳಗ ವೆಟ್ರಿ ಕಳಗಂ (ಟಿವಿಕೆ) ಅನ್ನು ಅಧಿಕೃತವಾಗಿ ಪ್ರಾರಂಭಿಸಿದರು. ಅವರ ಹೆಚ್ಚಿನ ರಾಜಕೀಯ ಚಟುವಟಿಕೆಗಳನ್ನು ಚೆನ್ನೈನ ಪನೈಯೂರ್‌ನಲ್ಲಿರುವ ಪಕ್ಷದ ಪ್ರಧಾನ ಕಚೇರಿಯಿಂದ ನಡೆಸಲಾಯಿತು. ವಿಮರ್ಶಕರು ಅವರನ್ನು ಮನೆಯಿಂದ ಕೆಲಸ ಮಾಡುವ ರಾಜಕಾರಣಿ ಮತ್ತು ಪನೈಯೂರ್ ಭೂಮಾಲೀಕ ಮುಂತಾದ ಲೇಬಲ್‌ಗಳೊಂದಿಗೆ ಅಪಹಾಸ್ಯ ಮಾಡಿದರು. ಆದರೆ ವಿಜಯ್ ಯಾವುದೇ ರೀತಿಯಲ್ಲಿ ವಿಚಲಿತರಾಗಲಿಲ್ಲ.

ತಮಿಳುನಾಡು ರಾಜಕೀಯದಲ್ಲಿ ಆಘಾತಕಾರಿ ಗೆಲುವು: ಇತ್ತೀಚೆಗೆ ಮುಕ್ತಾಯಗೊಂಡ ವಿಧಾನಸಭಾ ಚುನಾವಣೆಯಲ್ಲಿ, ವಿಜಯ್ ಸ್ವತಂತ್ರವಾಗಿ ಸ್ಪರ್ಧಿಸಲು ನಿರ್ಧರಿಸಿದರು. ಡಿಎಂಕೆ ಅಥವಾ ಎಐಎಡಿಎಂಕೆ ದ್ರಾವಿಡ ದೈತ್ಯರಿಗೆ ಇಷ್ಟು ಬೇಗ ಸವಾಲು ಹಾಕುವ ಹೊಸ ರಾಜಕೀಯ ಶಕ್ತಿಯನ್ನು ನಿರೀಕ್ಷಿಸಿರಲಿಲ್ಲ.

ಆರಂಭದಲ್ಲಿ, ವಿಜಯ್ ಅವರ ಬೆಂಬಲಿಗರು ಮತ್ತು ಪ್ರಚಾರ ವಿಧಾನಗಳನ್ನು ರಾಜಕೀಯ ವೀಕ್ಷಕರು ಅಪಹಾಸ್ಯ ಮಾಡಿದರು. ಆದಾಗ್ಯೂ, ಮೇ 4 ರಂದು ಘೋಷಿಸಲಾದ ಚುನಾವಣಾ ಫಲಿತಾಂಶಗಳು ತಮಿಳುನಾಡು ರಾಜಕೀಯವನ್ನು ದಿಗ್ಭ್ರಮೆಗೊಳಿಸಿದವು. ಟಿವಿಕೆ 108 ವಿಧಾನಸಭಾ ಕ್ಷೇತ್ರಗಳನ್ನು ಗೆದ್ದಿತು - ಕೇವಲ ಎರಡು ವರ್ಷ ವಯಸ್ಸಿನ ಪಕ್ಷಕ್ಕೆ ಇದು ಅಭೂತಪೂರ್ವ ಸಾಧನೆ. ತಮಿಳುನಾಡಿನ ಇತಿಹಾಸದಲ್ಲಿ ಯಾವುದೇ ರಾಜಕೀಯ ಪಕ್ಷವು ಅದರ ರಚನೆಯ ನಂತರ ಇಷ್ಟು ಕಡಿಮೆ ಅವಧಿಯಲ್ಲಿ ಇಷ್ಟು ದೊಡ್ಡ ಗೆಲುವು ಸಾಧಿಸಿರಲಿಲ್ಲ.

ವಿಜಯ್ ಮತ್ತು ಕೆಲವು ಹಿರಿಯ ನಾಯಕರನ್ನು ಹೊರತುಪಡಿಸಿ, ಹೆಚ್ಚಿನ ಟಿವಿಕೆ ಅಭ್ಯರ್ಥಿಗಳಿಗೆ ರಾಜ್ಯವ್ಯಾಪಿ ಸಾರ್ವಜನಿಕ ಮನ್ನಣೆಯ ಕೊರತೆಯಿತ್ತು. ಆದರೂ, ತಮಿಳುನಾಡಿನಾದ್ಯಂತ ಜನರು ವಿಜಯ್ ಫ್ಯಾಕ್ಟರ್ ಎಂದು ಬಣ್ಣಿಸಿದ್ದಕ್ಕೆ ಅಗಾಧವಾಗಿ ಮತ ಚಲಾಯಿಸಿದರು.

ಗಮನಾರ್ಹವಾಗಿ, ವಿಜಯ್ ಪ್ರತಿ ಕ್ಷೇತ್ರದಲ್ಲಿಯೂ ವ್ಯಾಪಕವಾಗಿ ಪ್ರಚಾರ ಮಾಡಲಿಲ್ಲ. ಇದರ ಹೊರತಾಗಿಯೂ, ಅವರ ಮೇಲಿನ ಸಾರ್ವಜನಿಕ ಪ್ರೀತಿ ಮತಗಳಾಗಿ ಪರಿವರ್ತನೆಯಾಯಿತು. ಅನೇಕ ಮನೆಗಳಲ್ಲಿ, ಹಿರಿಯರು ಸಹ ವಿಜಯ್ ಅವರನ್ನು ಮೆಚ್ಚಿದ ಕಿರಿಯ ಕುಟುಂಬ ಸದಸ್ಯರು ಮನವೊಲಿಸಿದ ನಂತರ ಟಿವಿಕೆಗೆ ಮತ ಹಾಕಿದರು ಎಂದು ವರದಿಯಾಗಿದೆ.

ವಿಭಿನ್ನ ರೀತಿಯ ರಾಜಕೀಯ ನಾಯಕ: ಸುದೀರ್ಘ ಭಾಷಣಗಳನ್ನು ನೀಡಲು ಹೆಸರುವಾಸಿಯಾದ ಸಾಂಪ್ರದಾಯಿಕ ರಾಜಕೀಯ ನಾಯಕರಿಗಿಂತ ಭಿನ್ನವಾಗಿ, ವಿಜಯ್ ಅವರನ್ನು ಸಾಮಾನ್ಯವಾಗಿ ಅಲ್ಪ ಪದಗಳ ವ್ಯಕ್ತಿಯಾಗಿ ನೋಡಲಾಗುತ್ತದೆ. ಬೆಂಬಲಿಗರು ಅವರು ವಾಕ್ಚಾತುರ್ಯಕ್ಕಿಂತ ಕ್ರಿಯೆಗೆ ಆದ್ಯತೆ ನೀಡುತ್ತಾರೆ ಎಂದು ಹೇಳಿಕೊಳ್ಳುತ್ತಾರೆ.

ಟಿವಿಕೆ ಏಕೈಕ ಅತಿದೊಡ್ಡ ಪಕ್ಷವಾಗಿ ಹೊರಹೊಮ್ಮಿದರೂ, ಅದು ಆರಂಭದಲ್ಲಿ ಬಹುಮತವನ್ನು ಪಡೆಯುವಲ್ಲಿ ವಿಫಲವಾಯಿತು, ವಿಜಯ್ ಅವರನ್ನು ಮುಖ್ಯಮಂತ್ರಿಯಾಗಿ ನೇಮಿಸುವುದನ್ನು ವಿಳಂಬಗೊಳಿಸಿತು. ತೀವ್ರ ರಾಜಕೀಯ ಮಾತುಕತೆಗಳು ಮತ್ತು ಹಲವಾರು ಪಕ್ಷಗಳ ಬೆಂಬಲದ ನಂತರ, ವಿಜಯ್ ಈಗ ತಮಿಳುನಾಡಿನ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಳ್ಳಲಿದ್ದಾರೆ.

ದಾರಿಯುದ್ದಕ್ಕೂ ಸವಾಲುಗಳು: ತಮ್ಮ ರಾಜಕೀಯ ಪಕ್ಷವನ್ನು ಪ್ರಾರಂಭಿಸಿದ ನಂತರ, ವಿಜಯ್ ಅನೇಕ ಸವಾಲುಗಳನ್ನು ಎದುರಿಸಿದರು. ಸೆನ್ಸಾರ್ ಪ್ರಮಾಣೀಕರಣ ಸಮಸ್ಯೆಗಳಿಂದಾಗಿ ಅವರ ಅಂತಿಮ ಚಿತ್ರ ಜನನಾಯಗನ್ ಬಿಡುಗಡೆ ವಿಳಂಬವಾಯಿತು. ನಂತರ, ಚಿತ್ರವನ್ನು ಆನ್‌ಲೈನ್‌ನಲ್ಲಿ ಅಕ್ರಮವಾಗಿ ಸೋರಿಕೆ ಮಾಡಲಾಯಿತು, ಇದು ಮತ್ತಷ್ಟು ವಿವಾದವನ್ನು ಸೃಷ್ಟಿಸಿತು.

ಕರೂರ್ ಜನಸಂದಣಿಯ ಕಾಲ್ತುಳಿತ ವಿವಾದ ಮತ್ತು ಅವರ ಪತ್ನಿ ಸಲ್ಲಿಸಿದ ವಿಚ್ಛೇದನ ಅರ್ಜಿಯ ವರದಿಗಳಂತಹ ಹಿನ್ನಡೆಗಳನ್ನು ಅವರು ಎದುರಿಸಿದರು. ಈ ವೈಯಕ್ತಿಕ ಮತ್ತು ರಾಜಕೀಯ ಸವಾಲುಗಳ ಹೊರತಾಗಿಯೂ, ಸಾರ್ವಜನಿಕರಲ್ಲಿ ವಿಜಯ್ ಅವರ ಜನಪ್ರಿಯತೆ ಬೆಳೆಯುತ್ತಲೇ ಇತ್ತು.

ತಮ್ಮ ಸಿನಿಮಾ ವೃತ್ತಿಜೀವನದ ಉತ್ತುಂಗದಲ್ಲಿದ್ದಾಗ, ವಿಜಯ್ ಚಲನಚಿತ್ರೋದ್ಯಮದ ಗ್ಲಾಮರ್ ಅನ್ನು ಬಿಟ್ಟು ಪೂರ್ಣ ಸಮಯ ಸಾರ್ವಜನಿಕ ಜೀವನವನ್ನು ಪ್ರವೇಶಿಸಲು ಆಯ್ಕೆ ಮಾಡಿಕೊಂಡರು.

ತಮಿಳು ಚಿತ್ರರಂಗವನ್ನು ಗೆದ್ದ ನಂತರ, ವಿಜಯ್ ಈಗ ರಾಜಕೀಯದಲ್ಲಿ ಹೊಸ ಪ್ರಯಾಣವನ್ನು ಪ್ರಾರಂಭಿಸಿದ್ದಾರೆ. ತಮಿಳುನಾಡಿನ ಜನರ ಕಲ್ಯಾಣಕ್ಕಾಗಿ ಕೆಲಸ ಮಾಡುವ ನಾಯಕನಾಗಿ ತಮ್ಮನ್ನು ತಾವು ಪ್ರಸ್ತುತಪಡಿಸಿಕೊಂಡಿದ್ದಾರೆ. ಅವರ ಪಕ್ಷದ ರಚನೆಯ ನಂತರ, ಬೆಂಬಲಿಗರು ಮತ್ತು ರಾಜಕೀಯ ವಿರೋಧಿಗಳು ಇಬ್ಬರೂ ಅವರ ಉದಯದ ಬಗ್ಗೆ ಚರ್ಚಿಸುತ್ತಲೇ ಇದ್ದಾರೆ - ಮತ್ತು ಚುನಾವಣಾ ಫಲಿತಾಂಶಗಳ ಒಂದು ವಾರದ ನಂತರವೂ, ವಿಜಯ್ ಎಂಬ ಹೆಸರು ತಮಿಳುನಾಡಿನ ರಾಜಕೀಯ ಭೂದೃಶ್ಯದಲ್ಲಿ ಪ್ರಾಬಲ್ಯ ಸಾಧಿಸುತ್ತಿದೆ.

Printed and Published by: SUNDAR and Owned by: SUNDAR Printed at: SHILPA PUBLICATIONS AND PRINTING PRESS, No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Published at: No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Editor: SUNDAR